**TEXT CROSS WITHIN THE BOOK ONLY**

UNIVERSAL LIBRARY
OU_198522
UNIVERSAL LIBRARY

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೮

# ಕನ್ನಡ ಸಾಹಿತ್ಯ

ಕೆ. ವೆಂಕಟರಾಮಪ್ಪ, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
೧೯೩೯

ಶ್ರೀ. ಕಂ. ಮು. ಪ್ರೆ. ೩೦೦೫ — ೨೨ ೧೧-೩೯

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಚಾನ್ಸಲರವರಾದ ಆಳುವ ಮಹಾಸ್ವಾಮಿಯವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆ ಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ಈ ಇಪ್ಪತ್ತುಮೂರು ವರ್ಷಗಳಿಂದಲೂ ವಿಶ್ವವಿದ್ಯಾನಿಲಯವು ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚು ಹಾಕಿಸಿದೆ; ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ನಡಿಸಲಾಗುತ್ತಿದೆ. ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ: ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ. ಇದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ನಮ್ಮ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿರುವರಷ್ಟೆ: ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನು ಕೊಟ್ಟು, ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು,
೨೯—೫—೧೯೩೯

**ಎನ್. ಎಸ್. ಸುಬ್ಬರಾವ್**

# ಪೀಠಿಕೆ.

ಕಳೆದ ವರ್ಷ ಆನೆಕಲ್ಲಿನಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕಸಂಘದವರು ಏರ್ಪಡಿಸಿದ ವಿಶೇಷ ಉಪನ್ಯಾಸ ಮಾಲೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ನಾನು ಕೊಟ್ಟ ಐದು ಉಪನ್ಯಾಸಗಳ ಸಾರವೇ ಈ ಚಿಕ್ಕಪುಸ್ತಕ. ಆರಿಸಿಕೊಂಡಿರುವ ವಿಷಯ ಬಹಳ ದೊಡ್ಡದು. ಇರುವ ಅವಕಾಶ ಚಿಕ್ಕದು. ಆದ್ದರಿಂದ ಮುಖ್ಯವಾದ ವಿಷಯಗಳನ್ನು ದಿಙ್ಮಾತ್ರ ಪ್ರದರ್ಶಿಸಿದ್ದೇನೆ. ಜನಸಾಮಾನ್ಯಕ್ಕೆ ಕನ್ನಡಸಾಹಿತ್ಯವನ್ನು ಪರಿಚಯಮಾಡಿಕೊಡುವುದಿಷ್ಟೇ ನನ್ನ ಉದ್ದೇಶ.

ಈ ಪುಸ್ತಕವನ್ನು ಬರೆಯಲು ನನ್ನನ್ನು ಪ್ರೋತ್ಸಾಹಿಸಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟು ನೆರವಾದ ಶ್ರೀಮಾನ್ ಎಸ್. ವಿ. ರಂಗಣ್ಣನವರಿಗೂ ಗ್ರಂಥಮಾಲೆಯ ಸಂಪಾದಕ ಮಂಡಲಿಗೂ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು
ಬಲಿಪಾಡ್ಯಮಿ, ಪ್ರಮಾಥಿ ಸಂವತ್ಸರ.

**ಕೆ. ವೆಂಕಟರಾಮಪ್ಪ.**

# ವಿಷಯ ಸೂಚಿಕೆ


೧. ಆರಂಭಕಾಲ .. ಪುಟ ೧-೭

ಹಲ್ಮಿಡಿಯ ಶಾಸನ (ಕ್ರಿ. ಶ. ಸುಮಾರು ೪೫೦), ಬಾದಾಮಿಯ ಶಾಸನ (ಕ್ರಿ.ಶ. ಸು. ೭೦೦), ಶ್ರವಣಬೆಳಗೊಳದ ಶಾಸನ (ಕ್ರಿ.ಶ. ಸು. ೭೦೦), ಕವಿರಾಜಮಾರ್ಗ. (ಕ್ರಿ.ಶ. ಸು. ೮೧೪-೮೭೭).

೨. ಪಂಪನ ಯುಗ ... ಪುಟ ೮-೩೨

ಪಂಪ: ಆದಿಪುರಾಣ (ಕ್ರಿ ಶ. ೯೪೧), ವಿಕ್ರಮಾರ್ಜುನ ವಿಜಯ — ರನ್ನ (ಕ್ರಿ ಶ. ೯೯೩): ಅಜಿತಪುರಾಣ, ಗದಾಯುದ್ಧ — ನಾಗವರ್ಮ (ಕ್ರಿ.ಶ. ೯೯೦): ಕಾದಂಬರಿ, ಛಂದೋಂಬುಧಿ — ನಾಗಚಂದ್ರ (ಕ್ರಿ.ಶ. ಸು. ೧೧೦೦): ರಾಮಚಂದ್ರ ಚರಿತ ಪುರಾಣ, ಮಲ್ಲಿನಾಥ ಪುರಾಣ — ನೇಮಿಚಂದ್ರ (ಕ್ರಿ ಶ. ೧೧೭೦): ಲೀಲಾವತೀ ಪ್ರಬಂಧ — ಆಂಡಯ್ಯ (ಕ್ರಿ ಶ ೧೨೩೫): ಕಬ್ಬಿಗರಕಾವ — ನಯಸೇನ (ಕ್ರಿ ಶ ೧೧೧೨): ಧರ್ಮಾಮೃತ — ಬ್ರಹ್ಮಶಿವ (ಕ್ರಿ.ಶ. ಸು. ೧೧೦೦) — ವೃತ್ತವಿಲಾಸ (ಸು. ೧೧೬೦) ಜನ್ನ (ಸು. ೧೦೨೯): ಯಶೋಧರ ಚರಿತ್ರೆ, ಅನಂತನಾಥಪುರಾಣ

೩. ಸ್ವತಂತ್ರಯುಗ .... ಪುಟ ೩೩-೪೮

ಬಸವಣ್ಣ (ಕ್ರಿ.ಶ. ಸು. ೧೧೬೦): ಷಟ್ಸ್ಥಳ ವಚನ — ಇತರ ವಚನಕಾರರು: ಅಲ್ಲಮಪ್ರಭು, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ ಮೊದಲಾದವರು (ಕ್ರಿ.ಶ. ಸು ೧೧೬೦) — ಹರಿಹರ (ಕ್ರಿ ಶ. ಸು. ೧೨೦೦): ಗಿರಿಜಾಕಲ್ಯಾಣ, ಬಸವರಾಜರಗಳೆ ಇತ್ಯಾದಿ — ರಾಘವಾಂಕ (ಕ್ರಿ.ಶ. ಸು. ೧೨೦೦): ಹರಿಶ್ಚಂದ್ರಕಾವ್ಯ ಇತ್ಯಾದಿ — ಕುಮಾರವ್ಯಾಸ (ಕ್ರಿ.ಶ. ಸು. ೧೪೩೦): ಗದುಗಿನ ಭಾರತ ದಶಪರ್ವ — ಕುಮಾರ

ವಾಲ್ಮೀಕಿ (ಕ್ರಿ. ಶ. ಸು. ೧೫೦೦): ತೊರವೆಯ ರಾಮಾಯಣ — ಲಕ್ಷ್ಮೀಶ (ಕ್ರಿ. ಶ. ಸು. ೧೬೦೦): ಜೈಮಿನಿ ಭಾರತ — ರತ್ನಾಕರ (ಕ್ರಿ. ಶ. ೧೫೫೭): ಭರತೇಶ ವೈಭವ — ಪುರಂದರದಾಸ (ಕ್ರಿ. ಶ. ಸು. ೧೫೪೦): ಕೀರ್ತನೆಗಳು. ಇತ್ಯಾದಿ.

೪. ಚಿಕ್ಕದೇವರಾಯರ ಕಾಲ .. ಪುಟ ೪೯-೫೬

ಚಿಕ್ಕದೇವರಾಯರು (ಕ್ರಿ. ಶ. ೧೬೭೨-೧೭೦೪): ಗೀತಗೋಪಾಲ, ಚಿಕ್ಕದೇವರಾಜ ಬಿನ್ನಪ — ತಿರುಮಲಾರ್ಯ (ಕ್ರಿ. ಶ. ೧೬೪೫-೧೭೦೬): ಅಪ್ರತಿಮ ವೀರಚರಿತ, ಚಿಕ್ಕದೇವರಾಯ ವಂಶಾವಳಿ, ಇತ್ಯಾದಿ — ಚಿಕ್ಕುಪಾಧ್ಯಾಯ (ಕ್ರಿ. ಶ. ೧೬೭೨): ರುಕ್ಮಾಂಗದ ಚರಿತ್ರೆ, ವಿಷ್ಣುಪುರಾಣ, ಇತ್ಯಾದಿ — ಸಿಂಗರಾರ್ಯ (ಕ್ರಿ. ಶ. ಸು. ೧೬೮೦): ಮಿತ್ರವಿಂದಾ ಗೋವಿಂದ — ಹೊನ್ನಮ್ಮ (ಕ್ರಿ. ಶ. ೧೬೬೦): ಹದಿಬದೆಯ ಧರ್ಮ — ಷಡಕ್ಷರದೇವ (ಕ್ರಿ. ಶ. ೧೬೫೫): ರಾಜಶೇಖರವಿಲಾಸ ಇತ್ಯಾದಿ — ವೆಂಕಟಾರ್ಯಶಿಷ್ಯ (ಕ್ರಿ. ಶ. ಸು. ೧೭೦೦): ಶ್ರೀಕೃಷ್ಣಗೋಪೀವಿಲಾಸ — ರಂಗನಾಥ (ಕ್ರಿ. ಶ. ಸು. ೧೬೭೫): ಅನುಭವಾಮೃತ.

೫. ಸಂಧಿಕಾಲ .... ಪುಟ ೫೭-೬೨

ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ. ಶ. ೧೭೯೪-೧೮೬೮): ಕೃಷ್ಣರಾಜ ವಾಣೀವಿಲಾಸ ಮಹಾಭಾರತ, ಶಾಕುಂತಲ ನಾಟಕ ನವೀನ ಟೀಕೆ ಇತ್ಯಾದಿ — ಕೆಂಪುನಾರಾಯಣ ಪಂಡಿತ (ಕ್ರಿ. ಶ. ೧೮೨೩): ಮುದ್ರಾಮಂಜೂಷ — ಬಸವಪ್ಪಶಾಸ್ತ್ರಿ (೧೯ ನೆಯ ಶತಮಾನದ ಕೊನೆ): ಶಾಕುಂತಲ ನಾಟಕ, ದಮಯಂತೀ ಸ್ವಯಂವರ ಇತ್ಯಾದಿ — 'ಮುದ್ದಣ': ರಾಮಾಶ್ವಮೇಧ, ಇತ್ಯಾದಿ — ಜನಪದಸಾಹಿತ್ಯ — ಸರ್ವಜ್ಞ (ಕ್ರಿ. ಶ. ಸು. ೧೭೦೦).

೬. ಪರಿಸಮಾಪ್ತಿ . ಪುಟ ೬೪

# ಕನ್ನಡ ಸಾಹಿತ್ಯ

## ಆರಂಭಕಾಲ

ಕನ್ನಡದಲ್ಲಿ ಕಾವ್ಯರಚನೆ ಯಾವಾಗ ಆರಂಭವಾಯಿತೆಂದು ಹೇಳುವುದು ಕಷ್ಟ; ಒಂಬತ್ತನೆಯ ಶತಮಾನಕ್ಕಿಂತ ಹಿಂದಿನ ಯಾವ ಗ್ರಂಥವೂ ಇದುವರೆಗೆ ದೊರೆತಿಲ್ಲ. ಆದರೆ ಕನ್ನಡ ಭಾಷೆಯೂ ಸಾಹಿತ್ಯವೂ ಒಂಬತ್ತನೆಯ ಶತಮಾನಕ್ಕಿಂತ ಹಿಂದೆ ಇದ್ದುವೆಂಬುದನ್ನು ತಿಳಿಯಲು ಅನೇಕ ಕನ್ನಡ ಶಾಸನಗಳ ಆಧಾರವಿದೆ. ಈ ಶಾಸನಗಳಲ್ಲಿ ಕೆಲವು ಕಲ್ಲಿನಮೇಲೆ ಕೊರೆದುವು; ಕೆಲವು ತಾಮ್ರದ ರೇಕುಗಳ ಮೇಲೆ ಬರೆದುವು. ಹೆಚ್ಚು ಸಂಖ್ಯೆಯ ಶಾಸನಗಳು ಗದ್ಯದಲ್ಲಿವೆ; ಕೆಲವು ಮಾತ್ರ ಪದ್ಯದಲ್ಲಿವೆ. ಇಲ್ಲಿ ಪರಿಶೀಲನೆಗಾಗಿ ಮೂರು ಶಾಸನಗಳನ್ನು ಮಾತ್ರ ಆಯ್ದುಕೊಂಡಿದೆ.

(೧) ಹಲ್ಮಿಡಿಯ ಶಾಸನ: ಬೇಲೂರಿನ ಬಳಿ ಹಲ್ಮಿಡಿ ಎಂಬ ಗ್ರಾಮದಲ್ಲಿ ಸಿಕ್ಕಿದುದರಿಂದ ಇದಕ್ಕೆ ಹಲ್ಮಿಡಿ ಶಾಸನ ಎಂಬ ಹೆಸರು ಬಂದಿದೆ. ಇದನ್ನು ಬರೆದ ಕಾಲ ಸುಮಾರು ಕ್ರಿ. ಶ. ೪೫೦; ಇದುವರೆಗೆ ದೊರೆತಿರುವ ಕನ್ನಡ ಶಾಸನಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದದ್ದು. ಆಗ ಕದಂಬನೆಂಬ ಒಬ್ಬ ರಾಜನು ವಿಜ ಅರಸ ಎಂಬವನಿಗೆ ಎರಡು ಗ್ರಾಮಗಳನ್ನು ದಾನವಾಗಿ ಕೊಟ್ಟನೆಂಬುದೇ ಈ ಶಾಸನದಲ್ಲಿ ಹೇಳಿರುವ ವಿಷಯ. ಆರಂಭದಲ್ಲಿ ಒಂದು ಸಂಸ್ಕೃತ ಶ್ಲೋಕವಿದೆ. ಮಿಕ್ಕ ಭಾಗವೆಲ್ಲ ಗದ್ಯದಲ್ಲಿದೆ. ಇದರಲ್ಲಿ ಸಂಸ್ಕೃತಪದಗಳ ಪ್ರಯೋಗ ಹೆಚ್ಚು. ಎಣಿಸಿಟ್ಟಹಾಗೆ ಇಪ್ಪತ್ತು ಕನ್ನಡಪದಗಳು ಮಾತ್ರ

ಇದರಲ್ಲಿ ಕಂಡುಬರುತ್ತವೆ. ಈ ಕಾಲಕ್ಕಾಗಲೇ ಕನ್ನಡದ ಮೇಲೆ ಸಂಸ್ಕೃತದ ವರ್ಚಸ್ಸು ಅಧಿಕವಾಗಿ ಬಿದ್ದಿರಬೇಕೆಂದು ಇದರಿಂದ ವ್ಯಕ್ತವಾಗುತ್ತದೆ.

(೨) ಬಾದಾಮಿಯ ಶಾಸನ: ಬಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿ ಎಂಬ ಊರಲ್ಲಿ ದೊರೆತ ಶಾಸನ. ಇದರ ರಚನೆಯ ಕಾಲ ಕ್ರಿ. ಶ. ಸುಮಾರು ೭೦೦ 'ಕಲಿಯುಗ ವಿಪರೀತ' ಎಂಬ ಬಿರುದನ್ನು ಪಡೆದಿದ್ದ ಕಪ್ಪೆಅರಭಟ್ಟ ಎಂಬವನ ಸ್ತೋತ್ರ ಈ ಶಾಸನದ ವಿಷಯ. ಅವನ ವರ್ಣನೆ ಈರೀತಿಯಾಗಿದೆ:

ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ ||

ಕಟ್ಟಿದ ಸಿಂಘಮನ್ ಕೆಟ್ಟೊದೇನೆಮಗೆಂದು
ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕಳ್
ಕೆಟ್ಟರ್ ಮೇಣ್ ಸತ್ತರವಿಚಾರಂ ||

(ಕಲಿಯುಗ ವಿಪರೀತನು ಸಾಧುಗಳಿಗೆ ಸಾಧುವಾಗಿಯೇ ಇರುವನು. ತನ್ನ ವಿಷಯದಲ್ಲಿ ಯಾರು ಸ್ನೇಹದಿಂದಿರುವರೋ ಅವರಿಗೆ ಅವನೂ ಸ್ನೇಹಿತನು. ತನ್ನನ್ನು ಬಾಧಿಸುವ ಕಲಿಗೆ ತನ್ನ ವಿಪರೀತವಾದ ಕಲಿತನವನ್ನು ತೋರಿಸದೆ ಬಿಡನು. ಇವನು ಸಾಕ್ಷಾತ್ ಮಾಧವನೇ ಹೊರತು ಬೇರೆಯಲ್ಲ. ಕಟ್ಟಿಹಾಕಿದ ಸಿಂಹವನ್ನು "ಇದರಿಂದ ಏನು ಕೆಡುಕು" ಎಂದು ಧೋರಣೆಯಿಂದ ಬಿಟ್ಟವರು ಹೇಗೆ ತಾವೇ ಕೆಡುತ್ತಾರೋ, ಸಾವನ್ನೇ ಪಡೆಯುತ್ತಾರೋ ಹಾಗೆ ಅರಭಟ್ಟನೊಡನೆ ವೈರ ಕಟ್ಟಿಕೊಂಡವರು ಕೆಡುವರು ಅಥವಾ ಸಾಯುವರು)

ಈ ಶಾಸನಕ್ಕೆ ಒಂದು ಕನ್ನಡದ ಪ್ರತಿಸ್ಪೃವಿದೆ. ಇದು ತ್ರಿಪದಿ ಎಂಬ ವೃತ್ತದಲ್ಲಿ ರಚಿತವಾಗಿದೆ. ತ್ರಿಪದಿ ಶುದ್ಧ

ಕನ್ನಡದ ಛಂದಸ್ಸು. ಸಂಸ್ಕೃತ ಕನ್ನಡ ಪದಗಳನ್ನು ಸಮ ಸಮವಾಗಿ ಇಲ್ಲಿ ಬಳಸಿದೆ. ಪದ್ಯದ ಓಟ ಕಿವಿಗೆ ಇಂಪಾಗಿಯೂ ಇದೆ. ಶಾಸನದಲ್ಲಿಯೇ ಇಂಥ ಪದ್ಯರಚನೆ ಇರಬೇಕಾದರೆ ಆ ಕಾಲದ ಜನರ ಬಾಯಲ್ಲಿಯೂ ಗ್ರಂಥಗಳಲ್ಲಿಯೂ ಈ ವಿಧವಾದ ಪದ್ಯದ ಬಳಕೆ ಹೇರಳವಾಗಿರಬೇಕೆಂದು ಸುಲಭವಾಗಿ ಊಹಿಸಿಕೊಳ್ಳಬಹುದು.

(೩) ಶ್ರವಣಬೆಳಗೊಳದ ಶಾಸನ: ಜೈನರ ಪುಣ್ಯಕ್ಷೇತ್ರವಾದ ಶ್ರವಣಬೆಳಗೊಳದಲ್ಲಿ ನೂರಾರು ಕನ್ನಡ ಶಾಸನಗಳಿವೆ. ಇವುಗಳಲ್ಲಿ ರೈಸರು ಮೊದಲು ಓದಿದ ಕನ್ನಡಶಾಸನ ಇದು. ಇದರ ಕಾಲ ಸು. ೭೦೦.

**ಸುರಚಾಪಂ ಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋಱಿ ಬೇಗಂ**
**ಪಿರಿಗುಂ ಶ್ರೀ ರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗಂ**
**ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆಂದು ಸಂನ್ಯಾಸನಂಗೆ**
**ಯ್ದು ರುಸತ್ವನ ನಂದಿಸೇನ ಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್ ||**

ನಂದಿಸೇನನೆಂಬ ಮುನಿಶ್ರೇಷ್ಠನು ಇಹಲೋಕದ ಸುಖ ವೈಭವಗಳು ಬಹಳ ಚಂಚಲವೆಂಬುದನ್ನು ಮನಗಂಡು ವೈರಾಗ್ಯದಿಂದ ಸಂನ್ಯಾಸಹಿಡಿದು ದೇವಲೋಕವನ್ನು ಸೇರಿದನೆಂಬುದೇ ಈ ಪದ್ಯದ ಅಭಿಪ್ರಾಯ. ಇದರಲ್ಲಿ ಕನ್ನಡ ಶಬ್ದಗಳಿಗಿಂತ ಸಂಸ್ಕೃತ ಶಬ್ದಗಳೇ ಹೆಚ್ಚಾಗಿವೆ; ಉದ್ದವಾದ ಸಮಾಸಪದಗಳೂ ಅಲ್ಲಲ್ಲಿ ಎದ್ದು ಕಾಣುತ್ತವೆ. ಅಲ್ಲದೆ 'ಸಂದಾನ್' 'ಧರಣಿಯುಳ್' ಎಂಬ ಪೂರ್ವದ ಹಳಗನ್ನಡದ ರೂಪಗಳೂ

ಇವೆ. ಇವು ತಮಿಳುಭಾಷೆಯ ಪದಗಳ ರೂಪಗಳನ್ನು ಹೋಲುತ್ತವೆಯೆಂದು ಯಾರು ಬೇಕಾದರೂ ಹೇಳಬಹುದು.

ಮಾದರಿಗಾಗಿ ಮೇಲೆ ಕೊಟ್ಟಿರುವ ಮೂರು ಶಾಸನಗಳಿಂದ ಕನ್ನಡ ನುಡಿಯ ಸ್ವರೂಪವೂ ಅದರ ಕವಿತೆಯ ಸ್ವಭಾವವೂ ಸ್ವಲ್ಪಮಟ್ಟಿಗೆ ತಿಳಿದುಬರುತ್ತವೆ. ಒಂಬತ್ತನೆಯ ಶತಮಾನಕ್ಕಿಂತ ಹಿಂದೆ ಇದ್ದ ಕನ್ನಡ ನುಡಿ ಹಳಗನ್ನಡಕ್ಕಿಂತ ಹಳೆಯದಾಗಿ ತಮಿಳುಭಾಷೆಯನ್ನು ಬಲುಮಟ್ಟಿಗೆ ಹೋಲುತ್ತಿತ್ತು. ಸಂಸ್ಕೃತಭಾಷೆಯ ಮತ್ತು ಅದರ ಸಾಹಿತ್ಯದ ಪರಿಚಯವೂ ಅನುಸರಣವೂ ಕನ್ನಡಿಗರಿಗೆ ಚೆನ್ನಾಗಿ ಉಂಟಾಗಿತ್ತು. ದೇಶೀಯವಾದ ಪದ್ಯಗಳೂ ಇದ್ದುವು; ಸಂಸ್ಕೃತದ ಪದ್ಯಬಂಧವೂ ಪ್ರಚುರವಾಗಿತ್ತು. ಸಂಸ್ಕೃತದ ಸಂಪರ್ಕದಿಂದ ಕನ್ನಡದಲ್ಲಿ ಗ್ರಂಥರಚನೆ ಉಂಟಾಗಿದ್ದರೂ ಇರಬಹುದು. ಗ್ರಂಥಸ್ಥವಾಗದೆ ಇರುವ ಜನಪದಸಾಹಿತ್ಯ ಯಥೇಚ್ಛವಾಗಿ ಇದ್ದಿರಬೇಕು.

ಕನ್ನಡಸಾಹಿತ್ಯದ ಆರಂಭಕಾಲದ ಪರಿಸ್ಥಿತಿಯನ್ನು ತಿಳಿಯಲು ಇರುವ ಎರಡನೆಯ ಆಧಾರ "ಕವಿರಾಜಮಾರ್ಗ" ಎಂಬ ಪುಸ್ತಕ. ನಮಗೆ ಇದುವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲೆಲ್ಲ ಅತ್ಯಂತ ಪುರಾತನವಾದದ್ದು ಇದೇ. ಇದನ್ನು ಬರೆದವನು ಬಹುಶಃ ನೃಪತುಂಗನೆಂಬ ರಾಷ್ಟ್ರಕೂಟ ಚಕ್ರವರ್ತಿ. ಈತನು ಮಾನ್ಯಖೇಟ (ಈಗಿನ ಮಾಳಖೇಡ)ದಲ್ಲಿ ರಾಜ್ಯಭಾರ ಮಾಡುತ್ತಿದ್ದನು. "ಕವಿರಾಜಮಾರ್ಗ"ವು ಅದರ ಹೆಸರೇ ಸೂಚಿಸುವಂತೆ ಒಂದು ಲಕ್ಷಣಗ್ರಂಥ. ಕಾವ್ಯದ ಗುಣದೋಷಗಳನ್ನು ವಿವರಿಸುವುದೇ ಈ ಗ್ರಂಥದ ಉದ್ದೇಶ. ಇದು ಬಹಳಮಟ್ಟಿಗೆ ದಂಡಿಯ "ಕಾವ್ಯಾದರ್ಶ"ವೆಂಬ ಸಂಸ್ಕೃತ ಗ್ರಂಥವನ್ನು ಅನುಸರಿಸಿದರೂ ಇದಕ್ಕೆ ಬೇರೆ ಕಾರಣಗಳಿಂದ

ಬಹಳ ಪ್ರಾಶಸ್ತ್ಯವೊದಗಿದೆ. ಕನ್ನಡನಾಡಿನ ವಿಸ್ತೀರ್ಣ, ಆಗಿನ ಜನರ ನಾಗರಿಕತೆ, ಮುಂತಾದುವನ್ನು ಕುರಿತು ಕವಿಯು ಹೇಳುವ ಹಲವು ವಿಷಯಗಳು ಬಹಳ ಸ್ವಾರಸ್ಯವಾಗಿವೆ. ಕನ್ನಡಸಾಹಿತ್ಯದ ಪ್ರಾಚೀನತೆಯನ್ನು ಸ್ಥಾಪಿಸುವ ಹಲವು ಹೇಳಿಕೆಗಳೂ ಈ ಗ್ರಂಥದಲ್ಲಿ ಅಡಕವಾಗಿವೆ. ಹೀಗೆ ಚರಿತ್ರೆಯ ದೃಷ್ಟಿಯಿಂದ ' ಕವಿರಾಜಮಾರ್ಗ ' ವು ಬಹಳ ಮುಖ್ಯವಾಗಿದೆ.

ಕಾವೇರಿಯಿಂದ ಗೋದಾವರಿಯವರೆಗೂ ಕನ್ನಡವು ವ್ಯಾಪಿಸಿತ್ತೆಂದು ನೃಪತುಂಗನು ಹೇಳಿದ್ದಾನೆ. ಆದರೆ ಈಗ ಇದರ ಬಹುಭಾಗ ಅನ್ಯಭಾಷೆಗಳ ವಶವಾಗಿದೆ. ತೆಲುಗು, ಮರಾಠಿ ಮತ್ತು ತಮಿಳುಭಾಷೆಗಳು ಪ್ರಬಲಿಸಿ ಕರ್ಣಾಟದ ಹಲವು ಭಾಗಗಳನ್ನು ಆಕ್ರಮಿಸಿಕೊಂಡಿವೆ. ಒಂದಾನೊಂದು ಕಾಲದಲ್ಲಿ ಕೊಲ್ಹಾಪುರವು ಕನ್ನಡನಾಡಿನ ಒಂದು ಭಾಗವಾಗಿತ್ತೆಂದರೆ ಎಲ್ಲರೂ ಆಶ್ಚರ್ಯಪಡಬಹುದು. ಶಾಲ್ಯ, ಕೊಯಮತ್ತೂರು ಜಿಲ್ಲೆಗಳ ಬಹುಭಾಗದಲ್ಲಿ ತಮಿಳು ಪ್ರಬಲಿಸಿ ಕನ್ನಡವು ಕಣ್ಮರೆಯಾಗುತ್ತಿದೆ. ಈಗ ಹೇಗೆ ಇದ್ದರೂ ನೃಪತುಂಗನ ಕಾಲಕ್ಕೆ ಕನ್ನಡನಾಡು ಕಾವೇರೀತೀರದಿಂದ ಗೋದಾವರಿಯ ವರೆಗೆ ವ್ಯಾಪಿಸಿತ್ತೆಂಬುದರಲ್ಲಿ ಸಂದೇಹವಿಲ್ಲ. ಇಷ್ಟು ವಿಸ್ತಾರವಾದ ದೇಶದಲ್ಲಿ ತಿರುಳ್ಗನ್ನಡದ ನಾಡಾವುದೆಂಬುದನ್ನು ಕವಿರಾಜಮಾರ್ಗಕಾರನು ಈ ಪದ್ಯದಲ್ಲಿ ಹೇಳಿದ್ದಾನೆ :

**ಅದಱೊಳಗಂ ಕಿಸುವೊೞಲಾ**
**ವಿದಿತಮಹಾಕೊಪಣನಗರದಾ ಪುಲಿಗೆಱೆಯಾ**
**ಸದಭಿಸ್ತುತಮಪ್ಪೊಂಕುಂ**
**ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥**

ಕಿಸುವೊಳಲ್ ಎಂಬುದು ಈಗಿನ ಪಟ್ಟದಕಲ್ಲು. ಇದು ಬಾದಾಮಿಯ ಹತ್ತಿರ ಇದೆ. ಒಂಕುಂದವೆಂಬುದು ಈಗಿನ ಬೆಳಗಾಂ ಜಿಲ್ಲೆಗೆ ಸೇರಿದ ಒಕ್ಕುಂದ. ಈಗಿನ ಲಕ್ಷ್ಮೇಶ್ವರವೇ ಪುಲಿಗೆಱೆ; ಕೊಪ್ಪಳವೇ ಕೊಪಣ. ಇದರಲ್ಲಿ ಮೈಸೂರಿನ ಹೆಸರೇ ಇಲ್ಲ. ಬಹುಶಃ ನೃಪತುಂಗಚಕ್ರವರ್ತಿಯ ಕಾಲಕ್ಕೆ ಮೈಸೂರು ತಿರುಳ್ಗನ್ನಡದ ಸೀಮೆಯಾಗಿರಲಿಲ್ಲವಾದೀತು! ಕನ್ನಡಸಾಹಿತ್ಯ ಸರಸ್ವತಿಯು ಮೊದಲು ಉತ್ತರದಲ್ಲಿದ್ದು ಕ್ರಮಕ್ರಮವಾಗಿ ದಕ್ಷಿಣದ ಕಡೆಗೆ ನಡೆದು ಕೊಂಚಕಾಲ ವಿಜಯನಗರದಲ್ಲಿದ್ದು ಕೊನೆಗೆ ಮೈಸೂರನ್ನು ಸೇರಿದಂತೆ ತೋರುತ್ತದೆ.

ಕನ್ನಡನಾಡವರ ಹೆಚ್ಚುಗೆಯನ್ನು ಕುರಿತು ನೃಪತುಂಗನು ಹೇಳಿರುವ ಮಾತುಗಳು ಬಹಳ ಚೆನ್ನಾಗಿವೆ. ಕನ್ನಡಿಗರು "ಕುಱಿತೋದದೆಯುಂ ಕಾವ್ಯಪ್ರಯೋಗಪರಿಣತಮತಿ'ಗಳಂತೆ! "ಕಿಱುವಕ್ಕಳುಮಾ ಮೂಗರುಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ." ನೃಪತುಂಗನ ಈ ಮಾತುಗಳಿಂದ ಆತನಿಗೆ ಕನ್ನಡನಾಡಿನ ವಿಷಯದಲ್ಲಿದ್ದ ಉತ್ಕಟವಾದ ಅಭಿಮಾನವನ್ನು ಸುಲಭವಾಗಿ ಊಹಿಸಬಹುದು.

ಕವಿರಾಜಮಾರ್ಗದಲ್ಲಿ ನೃಪತುಂಗನು ತನಗಿಂತ ಮುಂಚೆ ಇದ್ದ ಹಲವರು ಕನ್ನಡಕವಿಗಳ ಹೆಸರುಗಳನ್ನು ಹೇಳಿದ್ದಾನೆ. ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಮೊದಲಾದವರು ಕನ್ನಡದಲ್ಲಿ ಪದ್ಯಕಾವ್ಯಗಳನ್ನು ಬರೆದಿದ್ದರಂತೆ. ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರು "ಗದ್ಯಾಶ್ರಮಗುರುಪದತಾಪ್ರತೀತಿ" ಯನ್ನು ಕೈಕೊಂಡಿದ್ದರಂತೆ! ಅಲ್ಲದೆ ರಾಮಾಯಣದ ಕಥೆಗೆ ಸಂಬಂಧಪಟ್ಟ ಹಲವು ಪದ್ಯಗಳು ಕವಿರಾಜಮಾರ್ಗದಲ್ಲಿ

ಉದಾಹೃತವಾಗಿರುವುದರಿಂದ ನೃಪತುಂಗನಿಗಿಂತ ಮುಂಚೆ ಯಾರೋ ರಾಮಾಯಣವನ್ನು ಕನ್ನಡದಲ್ಲಿ ಬರೆದಿರಬಹುದೆಂಬ ಊಹೆಗೆ ಅವಕಾಶವಿದೆ.

ಹೀಗೆ ನೃಪತುಂಗನಿಗಿಂತ ಮುಂಚೆಯೇ ಕನ್ನಡದಲ್ಲಿ ಕಾವ್ಯರಚನೆ ನಡೆದು ಸಂಸ್ಕೃತ ಕನ್ನಡಗಳೆರಡೂ ಬೆರಕೆಯಾದ ಒಂದು ಪ್ರೌಢಶೈಲಿಯು ಏರ್ಪಟ್ಟಿದ್ದುದರಿಂದ ಅವನ ತರುವಾಯ ಬಂದ ಪಂಪನೇ ಮೊದಲಾದ ಕವಿಗಳು ಆ ಶೈಲಿಯನ್ನು ಅನುಸರಿಸಿ ಕಾವ್ಯ ಬರೆಯಲು ಅನುಕೂಲವಾಯಿತು.

# ಪಂಪನ ಯುಗ

ಸಾಮಾನ್ಯವಾಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಜೈನ ಕಾಲ, ವೀರಶೈವಕಾಲ, ಬ್ರಾಹ್ಮಣಕಾಲ ಎಂದು ವಿಭಾಗ ಮಾಡುವುದು ವಾಡಿಕೆಯಾಗಿದೆ. ಆದರೆ ಯಾವ ಒಂದು ಕಾಲದಲ್ಲಿಯೂ ಒಂದೇ ಮತದವರು ಗ್ರಂಥರಚನೆಮಾಡಿಲ್ಲ. ಆದ್ದರಿಂದ ಆ ವಿಭಾಗಕ್ರಮವನ್ನು ಬಿಟ್ಟು ಆಯಾಕಾಲದಲ್ಲಿ ಪ್ರಧಾನರಾದ ಕವಿಗಳ ಹೆಸರನ್ನು ಅಥವಾ ಆಯಾಕಾಲದ ಕಾವ್ಯಗಳ ವೈಶಿಷ್ಟ್ಯವನ್ನು ಸೂಚಿಸುವ ಒಂದು ಹೆಸರನ್ನು ಕೊಡಲು ಇಲ್ಲಿ ಯತ್ನಿಸಿದೆ.

ಪಂಪನು ಒಂದು ವಿಧದಲ್ಲಿ ಕನ್ನಡದ ಆದಿಕವಿಯೆನ್ನಬಹುದು; ನೃಪತುಂಗನು ಪಂಪನಿಗಿಂತ ಮುಂಚಿನವನಾದರೂ ಅವನದು ಶಾಸ್ತ್ರ ಗ್ರಂಥವೇ ಹೊರತು ಕಾವ್ಯವಲ್ಲ. ಪಂಪನಿಗೆ ಹಿಂದೆ ಕನ್ನಡದಲ್ಲಿ ಕಾವ್ಯಗಳು ಹುಟ್ಟಿದ್ದರೂ ಇದುವರೆಗೆ ಅವುಗಳಲ್ಲಿ ಒಂದೂ ನಮಗೆ ದೊರೆತಿಲ್ಲ.

ಪಂಪನು ಸುಮಾರು ಕ್ರಿಸ್ತಶಕ ೯೪೧ರಲ್ಲಿ ಗ್ರಂಥರಚನೆ ಮಾಡಿದನು. ಆದಿಪುರಾಣವೂ ವಿಕ್ರಮಾರ್ಜುನವಿಜಯವೂ ಇವನ ಗ್ರಂಥಗಳು. ಆದಿಪುರಾಣದಲ್ಲಿ ಮೊದಲನೆಯ ತೀರ್ಥಂಕರನಾದ ವೃಷಭನಾಥನ ಚರಿತ್ರೆಯು ವರ್ಣಿತವಾಗಿದೆ. 'ವಿಕ್ರಮಾರ್ಜುನ ವಿಜಯ'ವು ಮಹಾಭಾರತದ ಕಥೆಯನ್ನು ನಿರೂಪಿಸುತ್ತದೆ. ಎರಡೂ ಚಂಪೂಕಾವ್ಯಗಳು, ಪಂಪನ ತರುವಾಯ ಬಂದ ಹಲವರು ಕನ್ನಡಕವಿಗಳು ಅವನನ್ನು ಬಹಳವಾಗಿ ಹೊಗಳಿದ್ದಾರೆ. ನಾಗಚಂದ್ರನೆಂಬ ಕವಿಯು ತಾನೂ ಪಂಪನಂತೆಯೇ ಗ್ರಂಥಬರೆಯಬೇಕೆಂದು ಹೊರಟು 'ಅಭಿನವಪಂಪ' ಎಂಬ ಹೊಸ ಹೆಸರನ್ನು ಕೂಡ ಧರಿಸಿಬಿಟ್ಟನು.

ಇದರಿಂದ ಆಮೇಲಿನ ಜೈನ ಕವಿಗಳಿಗೆ ಆದಿಪಂಪನ ವಿಷಯದಲ್ಲಿ ಎಷ್ಟು ಭಕ್ತಿಗೌರವಗಳಿದ್ದುವೆಂಬುದು ಸ್ಪಷ್ಟವಾಗುತ್ತದೆ. ಪಂಪನೇ ಈಚಿನ ಎಲ್ಲ ಕವಿಗಳಿಗೂ ಮೇಲ್ಪಂಕ್ತಿಯಾಗಿದ್ದಾನೆ. ಸುಮಾರು ೧೨೦೦ರ ವರೆಗೆ ಕನ್ನಡದಲ್ಲಿ ಅನೇಕ ಚಂಪೂ ಗ್ರಂಥಗಳು ಹುಟ್ಟಿದುವು. ಅವೆಲ್ಲ ಬಹಳಮಟ್ಟಿಗೆ ಪಂಪನ ಮಾರ್ಗವನ್ನು ಅನುಸರಿಸಿ ಬರೆದಂಥವು. ಆದ್ದರಿಂದ ಸ್ಥೂಲವಾಗಿ ಕ್ರಿ. ಶ. ೯೦೦ ರಿಂದ ೧೨೦೦ ರ ವರೆಗಿನ ಕಾಲವನ್ನು ಚಂಪೂ ಯುಗ ಅಥವಾ ಪಂಪನ ಯುಗವೆಂದು ಕರೆಯಬಹುದು. ಕೀರ್ತಿವಂತರೂ ಪಂಡಿತಮಾನ್ಯರೂ ಆದ ಕನ್ನಡಕವಿಗಳಲ್ಲಿ ಬಹಳ ಮಂದಿ ಈ ಕಾಲದಲ್ಲಿಯೇ ಹುಟ್ಟಿದ್ದರಿಂದ ಇದನ್ನು ಕನ್ನಡ ಸಾಹಿತ್ಯದ ಸ್ವರ್ಣಯುಗವೆಂದು ಕರೆದರೂ ತಪ್ಪಲ್ಲ.

ಪಂಪನ ತಂದೆಯಾದ ಅಭಿರಾಮ ದೇವರಾಯ "ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ಸಂಬಲೀ ಮಾತೊ ಜಿನೇಂದ್ರಧರ್ಮವೆ ವಲಂ ದೊರೆ ಧರ್ಮದೊಳೆಂದು ನಂಬಿ" ಜೈನಧರ್ಮವನ್ನು ಸ್ವೀಕರಿಸಿದನಂತೆ. ಪಂಪನು ಕೇವಲ ಕವಿಯೇ ಅಲ್ಲದೆ ದೊಡ್ಡ ಕಲಿಯೂ ಆಗಿದ್ದನು. ಅವನನ್ನು ಅರಿಕೇಸರಿ ರಾಜನು ಆದರಿಸಿ, ಒಂದು ವರ್ಷದೊಳಗಾಗಿ ಮಹಾಕಾವ್ಯವೊಂದನ್ನು ಬರೆಯಬೇಕೆಂದು ಪ್ರಾರ್ಥಿಸಿದನು. ಪಂಡಿತರೂ ಬಂದು ಅವನನ್ನು ಒತ್ತಾಯಪಡಿಸಿದರು. ಇವರ ಪ್ರಾರ್ಥನೆಯಂತೆ ಪಂಪನು ಮಹಾಭಾರತವನ್ನು ಬರೆಯಲು ಸಂಕಲ್ಪಿಸಿದನು. ತನಗೆ ಆಶ್ರಯದಾತನಾದ ಅರಿಕೇಸರಿಯ ಸಚ್ಚರಿತ್ರಕ್ಕೆ ಮೆಚ್ಚಿದ ಈ ಕವಿಯು ಅವನನ್ನು ಅರ್ಜುನನಿಗೆ ಹೋಲಿಸಿರುವನು. ಆದ್ದರಿಂದಲೇ ಈ ಕಾವ್ಯಕ್ಕೆ "ವಿಕ್ರಮಾರ್ಜುನ ವಿಜಯ" ವೆಂದು ಹೆಸರಿಟ್ಟನು.

ಕಥಾಸಂವಿಧಾನದಲ್ಲಿ ಪಂಪನು ಕೆಲವು ಮುಖ್ಯವಾದ ವ್ಯತ್ಯಾಸಗಳನ್ನು ಮಾಡಿದ್ದಾನೆ. ಅವನ ಪ್ರಕಾರ ಪಾಂಚಾಲಿಯು ಪಂಚವಲ್ಲಭೆಯಲ್ಲ; ಅವಳು ಅರ್ಜುನನೊಬ್ಬನ ಮಡದಿ. ಈ ಬದಲಾವಣೆ ಒಂದು ನೀತಿಯ ದೃಷ್ಟಿಯಿಂದ ಉತ್ತಮವಾಗಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಕವಿಗೆ ಇದರಿಂದ ಬಹಳ ತೊಂದರೆಯಾಗಿದೆ. ಅರಿಕೇಸರಿಯನ್ನು ಕಿರೀಟಿಗೆ ಹೋಲಿಸಿ ಹೇಳಹೊರಟು ಪಂಪನು ಭಾರತಕಥೆಯಲ್ಲಿ ಇನ್ನೊಂದು ಮುಖ್ಯವಾದ ವ್ಯತ್ಯಾಸವನ್ನು ಮಾಡಬೇಕಾಯಿತು. ಪಂಪಭಾರತದಲ್ಲಿ ಕೃಷ್ಣನಿಗೆ ಹೆಚ್ಚು ಪ್ರಾಧಾನ್ಯವಿಲ್ಲ. ಅವನು ಮಹಾ ಬುದ್ಧಿಶಾಲಿ, ಪಾಂಡವರ ಪರಮ ಮಿತ್ರ. ಆದರೆ ಕೆಲವು ಇತರ ಭಾರತಗಳಲ್ಲಿರುವಂತೆ ಕಥೆಯ ಸೂತ್ರಧಾರನಲ್ಲ. ಹಾಗೆ ಸೂತ್ರಧಾರನನ್ನಾಗಿ ಮಾಡಿದರೆ ಅರ್ಜುನನ ಪ್ರಾಶಸ್ತ್ಯಕ್ಕೆ ಭಂಗ ಬರುತ್ತದೆ. ಅದರಿಂದ ಅರಿಕೇಸರಿಯ ಶ್ರೇಷ್ಠತೆಯೂ ಕಡಮೆಯಾಗುತ್ತದೆ. ಆದ್ದರಿಂದಲೇ ಕೃಷ್ಣನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಗ್ರಂಥದ ಕೊನೆಯಲ್ಲಿ ಪಂಪನು ಮಹಾಭಾರತದ ಪ್ರಧಾನನಾಯಕರನ್ನೂ ಅವರ ಮುಖ್ಯ ಗುಣಗಳನ್ನೂ ಹೇಳಹೊರಟು ಕೃಷ್ಣನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಾನೆ:

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
**ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀಭಾರತಂ ಲೋಕಪೂಜ್ಯಂ ॥**

ಸುಪ್ರೀತನ ಹೆಸರನ್ನು ಹೇಳಿದ ಪಂಪನಿಗೆ ಕೃಷ್ಣನ ಹೆಸರನ್ನು ಹೇಳುವುದು ಕಷ್ಟವಾಗುತ್ತಿರಲಿಲ್ಲ. ಆದರೆ ಅವನು ಜೈನಸಂಪ್ರದಾಯದವನಾದ್ದರಿಂದ ಕೃಷ್ಣನ ಅವತಾರ ತತ್ವಕ್ಕೆ ಪ್ರಾಮುಖ್ಯವನ್ನು ಕೊಡದೆ ಹೋದನು.

ಹೀಗೆ ಹಲವು ವ್ಯತ್ಯಾಸಗಳನ್ನು ಮಾಡಿದರೂ ಪಂಪನು ತನ್ನ ಭಾರತದಲ್ಲಿ ಬಹಳಮಟ್ಟಿಗೆ ವ್ಯಾಸಭಾರತವನ್ನೇ ಅನುಸರಿಸಿದ್ದಾನೆ. “ಕತೆಯ ಮೆಯ್ಗಿಡಲೀಯದೆ” ಹೇಳಬೇಕೆಂಬುದೇ ಅವನ ಸಂಕಲ್ಪ. ಇದಕ್ಕಾಗಿ ಒಂದೊಂದು ಸಲ ಪಂಪನು ಭಾರತದ ಒಂದು ಇಡೀ ಉಪಾಖ್ಯಾನವನ್ನು ಒಂದು ಪದ್ಯದಲ್ಲಿ ಹೇಳಿ ಮುಗಿಸುತ್ತಾನೆ.

ಪಂಪನು ವಿಶಾಲಹೃದಯದ ಮಹಾಕವಿ. ಆದ್ದರಿಂದಲೇ ಅವನು ಎಲ್ಲ ಪಾತ್ರಗಳ ಘನತೆಯನ್ನೂ ಚೆನ್ನಾಗಿ ನಿರೂಪಿಸಿದ್ದಾನೆ. ಅರ್ಜುನನ ಪರಾಕ್ರಮವನ್ನು ವರ್ಣಿಸುವುದೇ ಕವಿಯ ಮುಖ್ಯೋದ್ದೇಶವಾದರೂ ಇತರ ಪಾತ್ರಗಳ ಘನತೆಗೆ ಕುಂದು ತಂದಿಲ್ಲ. ಕರ್ಣನ ತ್ಯಾಗ ಶೌರ್ಯಗಳನ್ನು ವರ್ಣಿಸುತ್ತ ಪಂಪನು ವೈಮರೆತು ಹೀಗೆ ಹೇಳಿದ್ದಾನೆ:

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ||

ದುರ್ಯೋಧನನನ್ನು ಕುರಿತ ಈ ಮಾತನ್ನು ಕೇಳಿ:

ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ವಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇ

ಪೆಱಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದನೆ ದಲೇನಭಿಮಾನಧನಂ ಸುಯೋಧನಂ ||

ದುರ್ಯೋಧನನ ಅಭಿಮಾನವೆಂಬುದು ದೇಶದಲ್ಲಿ ಗಾದೆಯ ಮಾತಾಗಿದೆ.

ಪಂಪನ ಕಲ್ಪನಾಸಾಮರ್ಥ್ಯವು ಅಗಾಧವಾದುದು. ದುಶ್ಶಾಸನ ವಧಾನಂತರ ಭೀಮನು ದ್ರೌಪದಿಯೊಡನೆ ಹೇಳುವ ಮಾತು ಬಹಳ ಸ್ವಾರಸ್ಯವಾಗಿದೆ :

ಇದಱೊಳ್ ಶ್ವೇತಾತಪತ್ರಸ್ಥಗಿತದಶದಿಶಾಮಂಡಲಂ ರಾಜಚಕ್ರಂ
ಪುದಿದಳ್ಕಾಡಿತ್ತುದಂಗಿತ್ತಿದಱೊಳೆ ಕುರುರಾಜಾನ್ವಯಂ ಮತ್ಪ್ರತಾಪ
ಕ್ಕಿದಱಿಂದಂ ನೋಡಗುರ್ವಿರ್ಪುದಿದುವೆ ಮಹಾಭಾರತಕ್ಕಾದಿಯಾಯ್ತು
ಬ್ಜದಳಾಕ್ಷೀ ಪೇೞ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ ||

ದ್ರೌಪದಿಯ ಕೇಶಪಾಶವೇ ಒಂದು ಪ್ರಪಂಚ. ಅದರಲ್ಲಿ ದಶದಿಕ್ಕುಗಳ ದೊರೆಗಳೂ ಅಡಗಿಹೋದರು. ಕೌರವವಂಶವೇ ಅದರಲ್ಲಿ ಕೊನೆಗಂಡಿತು. ಎಲ್ಲಕ್ಕಿಂತ ಮುಖ್ಯವಾಗಿ ಅದು ಮಹಾಭಾರತಕ್ಕೆ ಆದಿಯಾಯ್ತು ! ಮಹಾಭಾರತದ ಯುದ್ಧಕ್ಕೆ ಮೂಲಕಾರಣವೆಂದರೆ ದ್ರೌಪದಿಗೆ ಕೌರವರಿಂದ ಆದ ಅಪಮಾನ. ಪಂಪನ ಈ ಯೋಜನೆ ನಿಜವಾಗಿಯೂ ಅವನ ಕವಿತಾಶಕ್ತಿಗೆ ಕೀರ್ತಿಪ್ರದವಾಗಿದೆ. ಅಲ್ಲದೆ ಇಡೀ ಮಹಾಭಾರತದ ಕಥೆಯನ್ನೇ ಈ ಪದ್ಯವು ನಮ್ಮ ಮನಸ್ಸಿನಲ್ಲಿ ಚಿತ್ರದಂತೆ ತಂದು ನಿಲ್ಲಿಸುತ್ತದೆ.

ಪಂಪನು ಮಿತಭಾಷಿ. ಅನಾವಶ್ಯಕವಾಗಿ ಅವನು ಎಂದೂ ಪದಪ್ರಯೋಗಮಾಡುವವನಲ್ಲ. ಇವನ ಮಹಾಭಾರತದ ಒಂದು ಆಶ್ವಾಸದ ಕಥೆಯನ್ನು ಆಧಾರವಾಗಿಟ್ಟುಕೊಂಡು ರನ್ನ

ಕವಿಯು ಹತ್ತು ಆಶ್ವಾಸಗಳ ಗ್ರಂಥವನ್ನೇ ಬರದಿದ್ದಾನೆ. ರನ್ನನಂಥ ಉದ್ದಾಮಕವಿಯು ಪಂಪನ ಶೈಲಿಯನ್ನು ಮೆಚ್ಚಿ ಅವನ ಹಲವು ವಾಕ್ಯಗಳನ್ನು ಅಲ್ಪಸ್ವಲ್ಪ ವ್ಯತ್ಯಾಸದೊಡನೆ ತನ್ನ ಗ್ರಂಥದಲ್ಲಿ ಸೇರಿಸಿಕೊಂಡಿರುವುದರಿಂದ ಪಂಪನಶೈಲಿ, ಪದಪ್ರಯೋಗನಿಪುಣತೆ, ಔಚಿತ್ಯಜ್ಞಾನ ಮುಂತಾದುವನ್ನು ಹೆಚ್ಚಾಗಿ ವರ್ಣಿಸಬೇಕಾಗಿಲ್ಲ.

ಪಂಪನು ತನ್ನ ದೊರೆಯಾದ ಅರಿಕೇಸರಿಯ ಸಂತೋಷಕ್ಕಾಗಿ ವಿಕ್ರಮಾರ್ಜುನ ವಿಜಯವನ್ನು ಬರೆದನು. ತನ್ನ ಆತ್ಮಸಂತೋಷಕ್ಕಾಗಿ ಆದಿಪುರಾಣವನ್ನು ಬರೆದನು. ಜಿನೇಂದ್ರ ಚರಿತ್ರೆಯನ್ನು ಬರೆದು ತಾನು ಪುನೀತನಾಗಬೇಕೆಂಬ ಬಯಕೆ ಪಂಪನನ್ನು ಆದಿಪುರಾಣದ ರಚನೆಗೆ ಪ್ರೇರಿಸಿತು. ಆದಿಪುರಾಣವು ಮೊದಲ ತೀರ್ಥಂಕರನಾದ ವೃಷಭನ ಜೀವನಕಥೆ. ಜೈನಮತ ಪ್ರಚಾರಕರಲ್ಲಿ ಪ್ರಧಾನರಾದವರನ್ನು ತೀರ್ಥಂಕರರೆಂದು ಕರೆಯುವರು. ಅವರಲ್ಲಿ ವೃಷಭತೀರ್ಥಂಕರನು ಮೊದಲಿಗನು. ಈತನ ಜೀವನಕಥೆಯನ್ನೇ ಪಂಪನು ತನ್ನ ಆದಿಪುರಾಣದಲ್ಲಿ ಬರೆದಿದ್ದಾನೆ. ಈ ಕಥೆಯು ಸಂಸ್ಕೃತದಲ್ಲಿ ಜಿನಸೇನನ 'ಪೂರ್ವಪುರಾಣ' ಮೊದಲಾದ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಪಂಪನು ಇದನ್ನೇ ತನ್ನ ಕಾವ್ಯರಚನೆಯಲ್ಲಿ ಅನುಸರಿಸಿದ್ದಾನೆ.

ಆದಿಪುರಾಣವೂ ಮಹಾಭಾರತದಂತೆಯೇ ಚಂಪೂಕಾವ್ಯ. ಆದರೆ ಇದು ಪುರಾಣವಾದುದರಿಂದ ಕವಿಯ ಕಲ್ಪನಾಶಕ್ತಿಗೂ ಕಥನಕೌಶಲಕ್ಕೂ ಹೆಚ್ಚು ಅವಕಾಶವಿಲ್ಲ. ಈ ಪುರಾಣಕಥೆಯನ್ನು ಸಂಪ್ರದಾಯಾನುಸಾರವಾದ ರೀತಿಯಲ್ಲಿಯೇ ಹೇಳಬೇಕು. ಅದರಂತೆಯೇ ಪಂಪನು ಗ್ರಂಥಾರಂಭದಲ್ಲಿ ಪುರಾಣಲಕ್ಷಣಗಳನ್ನು ನಿರೂಪಿಸಿ ಲೋಕಾಕಾರ ಮೊದಲಾದುವುಗಳನ್ನು

ಹೇಳಿ ತೀರ್ಥಂಕರನ ಹಿಂದಿನ ಜನ್ಮಗಳ ಕಥೆಗೆ ಆರಂಭಿಸುತ್ತಾನೆ. ಗ್ರಂಥದ ಬಹುಭಾಗವು ಒಟ್ಟಿನ ಮೇಲೆ ನೀರಸವಾಗಿರುವ ಜನ್ಮಾಂತರ ಕಥೆಯಿಂದ ತುಂಬಿರುವುದರಿಂದ ಕೆಲವರಿಗೆ ಈ ಗ್ರಂಥವು ಬಹಳ ಮೆಚ್ಚಿಗೆಯಾಗಲಾರದು. ಗ್ರಂಥದ ಕೊನೆಯ ಭಾಗದಲ್ಲಿ ಬರುವ ಭರತಬಾಹುಬಲಿಗಳ ಕಥೆಯು ಸ್ವಾರಸ್ಯವಾಗಿದೆ. ಪಂಪನು ಈ ಪುರಾಣಕಥೆಯನ್ನೂ ತನ್ನ ವರ್ಣನಾವೈಖರಿಯಿಂದ, ಅಪೂರ್ವವಾದ ಪದಪ್ರಯೋಗ ಪದ್ಧತಿಯಿಂದ ಬಹಳ ರಸವತ್ತಾಗಿ ಹೇಳಿದ್ದಾನೆ. ಅದ್ದರಿಂದಲೇ ಮುಂದೆ ಬಂದ ಜೈನಕವಿಗಳೆಲ್ಲ ಪಂಪನನ್ನು ಹೊಗಳಿದರು. ರನ್ನನೂ "ಜಿನಸಮಯದೀಪಕ" ನಾದ ಪಂಪನನ್ನು ಬಹಳವಾಗಿ ಹೊಗಳಿದ್ದಾನೆ.

ದುರ್ಗಸಿಂಹ, ನಯಸೇನ, ನಾಗವರ್ಮ, ಅಗ್ಗಳ, ಜನ್ನ, ಕಮಲಭವ ಮೊದಲಾದ ಕನ್ನಡಕವಿಗಳು ಪಂಪನ 'ಸುಣ್ಣ ವೆತ್ತ ನುಡಿ', 'ವಾಗ್ವಿಲಾಸ' 'ಗೀರ್ಗುಂಫದ ಪೆಂಪು' 'ಸನ್ನುತ ಕವಿತಾಗುಣ' ಮೊದಲಾದುವನ್ನು ಮೆಚ್ಚಿಕೊಂಡಿದ್ದಾರೆ.

ಪಂಪನ ತರುವಾಯ ರನ್ನನು ಬಹಳ ಮುಖ್ಯವಾದ ಕವಿ. ಈತನು ಸುಮಾರು ಕ್ರಿಸ್ತಶಕ ೯೯೩ ರಲ್ಲಿ ಜೀವಿಸಿದ್ದನು. ಇವನು ಜಾತಿಯಲ್ಲಿ ವೈಶ್ಯ, ವೃತ್ತಿಯಲ್ಲಿ ಬಳೆಗಾರ, ಧರ್ಮದಲ್ಲಿ ಜೈನ. ಸಂಸ್ಕೃತ ಕನ್ನಡಗಳಲ್ಲಿ ಉದ್ದಾಮಪಾಂಡಿತ್ಯವನ್ನು ಸಂಪಾದಿಸಿ ಶ್ರೇಷ್ಠವಾದ ಗ್ರಂಥಗಳನ್ನು ರಚಿಸಿದನು. ಅಜಿತತೀರ್ಥಕರ ಪುರಾಣ, ಸಾಹಸ ಭೀಮವಿಜಯಗಳು ಇವನ ಗ್ರಂಥಗಳಲ್ಲಿ ನಮಗೆ ಸಿಕ್ಕಿರುವುವು. ಇವನೇ ಬರೆದನೆಂದು ಪ್ರಸಿದ್ಧವಾಗಿರುವ ಪರಶುರಾಮಚರಿತ, ಚಕ್ರೇಶ್ವರಚರಿತಗಳು ಇನ್ನೂ ಸಿಕ್ಕಿಲ್ಲ.

ಸಾಹಸ ಭೀಮವಿಜಯ (ಅಥವಾ ಗದಾಯುದ್ಧ) ವೇ ಈ ಚಕ್ರೇಶ್ವರಚರಿತವಾಗಿರಬಹುದೆಂದು ಕೆಲವರು ಊಹಿಸುತ್ತಾರೆ.

ಪಂಪನಿಗೆ ನಮ್ರತೆ ಹೆಚ್ಚಾದರೆ ರನ್ನನಿಗೆ ಆತ್ಮಪ್ರತ್ಯಯ ಬಹಳ. ತನ್ನ ಕವಿತಾಶಕ್ತಿಯನ್ನು ವಿಶೇಷವಾಗಿ ಹೊಗಳಿ ಕೊಂಡಿದ್ದಾನೆ:

ರತ್ನಪರೀಕ್ಷಕನಾಂ ಕೃತಿ
ರತ್ನಪರೀಕ್ಷಕನೆನೊಡು ಫಣಿಪತಿಯು ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇೞ್ ಪರೀಕ್ಷಿಸಂಗೆಂಟೆರ್ದೆಯೋ ||

ಎಂದು ಕೇಳಿದ್ದಾನೆ. ತಾನು ಸರಸ್ವತಿಯ ಭಂಡಾರದ ಮುದ್ರೆಯನ್ನೊಡೆದುಬಿಟ್ಟನಂತೆ:

ಆರಾತೀಯಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ ||

ಈ ರೀತಿಯಾಗಿ ರನ್ನನು ತನ್ನನ್ನು ವಿಶೇಷವಾಗಿ ಹೊಗಳಿಕೊಂಡಿದ್ದರೂ ಇದು ಒಣಜಂಭದ, ದುರಭಿಮಾನದ, ಪೊಳ್ಳು ಮಾತಲ್ಲ. ನಿಜವಾಗಿಯೂ ರನ್ನನು ಕವಿರತ್ನನೇ ಸರಿ.

ರನ್ನನೂ ಪಂಪನಂತೆ ಒಂದು ಧಾರ್ಮಿಕಕಾವ್ಯವನ್ನೂ ಒಂದು ಲೌಕಿಕ ಕಾವ್ಯವನ್ನೂ ಬರೆದಿದ್ದಾನೆ. ಅಜಿತತೀರ್ಥಕರ ಪುರಾಣವೇ ರನ್ನನ ಧಾರ್ಮಿಕಕಾವ್ಯ. ಇದು ಎರಡನೆಯ ತೀರ್ಥಂಕರನಾದ ಅಜಿತನಾಥನ ವೃತ್ತಾಂತ. ಈ ಗ್ರಂಥವನ್ನು ದಾನಚಿಂತಾಮಣಿಯೆಂದು ಪ್ರಸಿದ್ಧಳಾದ ಅತ್ತಿಮಬ್ಬೆಯ ಪ್ರಾರ್ಥನೆಯಂತೆ ಬರೆದನು. ಗ್ರಂಥದ ಕೊನೆಯಲ್ಲಿ ಅತ್ತಿಮಬ್ಬೆ

ಯನ್ನು ಪರಿಪರಿಯಾಗಿ ಹೊಗಳಿದ್ದಾನೆ. ಜೈನಪುರಾಣ ಕಥೆಗಳೆಲ್ಲ ಸ್ವಲ್ಪ ಹೆಚ್ಚುಕಡಮೆ ಒಂದೇ ರೀತಿಯಾಗಿರುತ್ತವೆ. ಇಲ್ಲಿ ಕವಿಯು ಹೆಚ್ಚು ಸ್ವಾತಂತ್ರ್ಯವನ್ನು ವಹಿಸಲು ಸಾಧ್ಯವಿಲ್ಲ. ಪ್ರತಿ ತೀರ್ಥಂಕರನಿಗೂ ಪಂಚಮಹಾಕಲ್ಯಾಣಗಳು ನಡೆಯುತ್ತವೆ. ಅವುಗಳನ್ನು ಕವಿಯು ವರ್ಣಿಸಬೇಕು. ಆ ವರ್ಣನಾವೈಖರಿ ಯಲ್ಲಿ ಕವಿಯ ಯೋಗ್ಯತೆಗೆ ಅನುಗುಣವಾದ ವ್ಯತ್ಯಾಸಗಳು ಕಾಣಬಹುದು. ತೀರ್ಥಂಕರರ ಹೆಸರು, ಬಣ್ಣ, ಎತ್ತರ ಮುಂ ತಾದುವುಗಳಲ್ಲಿ ವ್ಯತ್ಯಾಸ ಕಾಣಬಹುದು. ಅಷ್ಟೇಹೊರತು ಕಥಾ ಸರಣಿಯಲ್ಲಿ ಏನೂ ಭೇದವಿಲ್ಲ. ಆದ್ದರಿಂದ ಯಾವುದಾದರೂ ಒಂದು ಪುರಾಣವನ್ನು ಓದಿ ಗ್ರಹಿಸಿದರೆ ಮಿಕ್ಕೆಲ್ಲವುಗಳ ಸ್ವರೂಪ ವನ್ನು ಸುಲಭವಾಗಿ ಊಹಿಸಬಹುದು. ರನ್ನನ ಅಜಿತನಾಥ ಪುರಾಣದಲ್ಲಿ ಅವನ ಕವಿತಾಚಾತುರ್ಯವು ತಕ್ಕಮಟ್ಟಿಗೆ ವ್ಯಕ್ತವಾಗಿದೆ. ದೇಹಾನಿತ್ಯತೆಯನ್ನು ನಿರೂಪಿಸುವ ವೈರಾಗ್ಯ ಬೋಧಕವಾದ ಪದ್ಯಗಳು ಬಹಳ ಚೆನ್ನಾಗಿವೆ.

ಎನಿತೆನಿತು ಕಱಿದ ಭವಮಂ
ನೆನೆದಪೆ! ಎನಿತೆನಿತು ಭವದ ಬಂಧುಗಳಂ ನೀಂ
ನೆನೆದಪೆ! ಎನಿತೆನಿತೊಡಲಂ
ನೆನೆದಪೆ! ಎಲೆ ಜೀವ ನೀನೆ ಪೇೞ್ ಪವಣೊಳವೇ!

ಈ ವೈರಾಗ್ಯಬೋಧನೆಯು ಎಂಥಾ ಭೋಗಾಭಿಲಾಷಿಯನ್ನಾ ದರೂ ಅಯ್ಯೋ ಎನಿಸುವುದು. ಜೈನರುಮಾತ್ರವೇ ಅಲ್ಲ, ಸಮಸ್ತ ಭಾರತೀಯರಿಗೂ ಈ ಬೋಧೆಯು ಹಿಡಿಯುವುದು.

ಆದರೆ ರನ್ನನ ಸಂಪೂರ್ಣವಾದ ಘನತೆಯು ವ್ಯಕ್ತವಾಗು ವುದು ಅವನ ಸಾಹಸಭೀಮವಿಜಯದಲ್ಲಿ. ಪಂಪನ ಭಾರತ ವನ್ನೋದಿ ಸಂತೋಷಪಟ್ಟು ಅದರ ಹದಿಮೂರನೆಯ ಆಶ್ವಾಸ

ವನ್ನು ಆರಿಸಿಕೊಂಡು ರನ್ನನು ಅದನ್ನೇ ಒಂದು ಸ್ವತಂತ್ರ, ದೀರ್ಘಕಾವ್ಯವನ್ನಾಗಿ ಮಾಡಿದ್ದಾನೆ. ಹೀಗೆ ವಸ್ತುವನ್ನು ಬೇರೆ ಕವಿಯಿಂದ ಆರಿಸಿಕೊಂಡಮಾತ್ರಕ್ಕೇ ಕವಿಯ ಯೋಗ್ಯತೆ ಕಡಮೆಯಾಗುವುದಿಲ್ಲ. ಅದನ್ನು ಕವಿಯು ಹೇಗೆ ಶೃಂಗಾರ ಗೊಳಿಸಿರುವನೆಂಬುದನ್ನು ನೋಡಬೇಕು. ರನ್ನನು ಪಂಪನ ಹಲವು ವಾಕ್ಯಗಳನ್ನು ಕೊಂಚ ವ್ಯತ್ಯಾಸಗೊಳಿಸಿ ಅವಕ್ಕೆ ಒಂದು ಹೊಸ ಸೊಗಸನ್ನು ಕೊಟ್ಟಿರುವನು. ಚಿನ್ನದ ಅದುರನ್ನು ತೆಗೆದುಕೊಂಡು ಅದರಲ್ಲಿರುವ ಮಣ್ಣು ಮತ್ತು ಇತರ ಲೋಹ ಗಳನ್ನು ತೆಗೆದುಹಾಕಿ ಉತ್ತಮಚಿನ್ನವನ್ನೇ ಬೇರೆಮಾಡಿ ಮೆರುಗುಕೊಟ್ಟಂತೆ ರನ್ನನು ಭಾರತದ ಒಂದು ಭಾಗವನ್ನು ತನ್ನ ಕಾವ್ಯಕ್ಕೆ ವಸ್ತುವನ್ನಾಗಿ ಆರಿಸಿಕೊಂಡು ಒಂದು ಅಪೂರ್ವ ವಾದ ರಸಘಟ್ಟಿಯನ್ನೇ ನಿರ್ಮಿಸಿದ್ದಾನೆ.

ರನ್ನನ ಗದಾಯುದ್ಧಕ್ಕೆ ಭೀಮನೇ ನಾಯಕ. ಆದ್ದ ರಿಂದಲೇ ಗ್ರಂಥಕ್ಕೆ ಕವಿಯು ‘ ಸಾಹಸಭೀಮವಿಜಯ ’ ವೆಂದು ಹೆಸರಿಟ್ಟಿದ್ದಾನೆ. ಭಾರತಕಥೆಯ ಒಂದು ಭಾಗವನ್ನು ಮಾತ್ರ ಆರಿಸಿಕೊಂಡಿರುವುದರಿಂದ ರನ್ನನಿಗೆ ತನ್ನ ಚಮತ್ಕಾರವನ್ನು ಹೆಚ್ಚು ಪ್ರಕಾಶಪಡಿಸಲು ಅನುಕೂಲವಾಗಿದೆ. ದುರ್ಯೋ ಧನನು ಅಡಗಿದ್ದ ವೈಶಂಪಾಯನ ಸರೋವರದ ಬಳಿಗೆ ಹೋಗಿ ಅರ್ಜುನಾದಿಗಳು ಮೂದಲಿಸಿದಾಗ ಕೌರವನು ರೋಷಗೊಳ್ಳು ವುದಿಲ್ಲ. ಭೀಮನು ಬಂದು ನಿಂತು

**ಜಲದೊಳ್ ಮೀನಿರ್ಪವೊಲ್ ನೀಂ ಕೊಳದೊಳೆ ಮುಳುಗಿರ್ದಕ್ಕಟಾ**
**ಕೋಡ ನೇಡಿಂ**
**ಗೊಳಗಾದಯ್ ನಿನ್ನ ದುರ್ಯೋಧನನೆಸರ್ಗಿದು ಲಜ್ಜಾಕರಂ ತೋಟಿ**

ದರ್ಪ ನಿ

**ನ್ನಳವಂ ಚಿಃ ಸತ್ತರೇಂ ಪುಟ್ಟರೆ ಪೊಱಮಡು ನೀಂ ಕೈದುಗೊಳ್ ಕೌರವೇಂದ್ರಾ**
**ಚಳವಜ್ರಂ ಬಾದನೀಗಳ್ ಕುರುಕುಲಮಥನೋದ್ಭೀಕರಂ ಭೀಮಸೇನಂ ॥**

ಎಂದು ಮೂದಲಿಸಿದಾಗ ಕೌರವನ ರೋಷವು ಮಿತಿಮೀರುವುದು. "ನೀರೊಳಗಿರ್ದುಂ ಬೆಮರ್ತನುರಗಪತಾಕಂ" ಎಂದು ಕವಿಯು ಅವನ ಕೋಪದ ಆಧಿಕ್ಯವನ್ನು ಶಕ್ತಿಯುಕ್ತವಾಗಿ ವರ್ಣಿಸಿದ್ದಾನೆ. ಪಂಪನು ಕರ್ಣನ ಗುಣರಾಶಿಯನ್ನು ಮೆಚ್ಚಿ ವೈಮರೆತಂತೆ ರನ್ನನು ದುರ್ಯೋಧನನ ಪಾತ್ರನಿರೂಪಣೆಗೆ ತೊಡಗಿ ಕೊನೆಗೆ ಅವನನ್ನು 'ಮಹಾನುಭಾವ'ನನ್ನಾಗಿ ಮಾಡಿದ್ದಾನೆ. ದುರ್ಯೋಧನನು ಯುದ್ಧಭೂಮಿಯಲ್ಲಿ ಸಂಜಯನೊಬ್ಬನನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಿರುವಾಗ ಅಭಿಮನ್ಯುವಿನ ಶವವು ಕಾಣುವುದು. ಆಗ ಅವನ ಪರಾಕ್ರಮವನ್ನು ಹೀಗೆ ಹೊಗಳುವನು.

**ಅಸಮಬಲ ಭವದ್ವಿಕ್ರಮ**
**ಮಸಂಭವಂ ಪೆಱರ್ಗೆ ನಿನ್ನನಾನಿತಂ ಪ್ರಾ**
**ರ್ಥಿಸುವೆನಭಿಮನ್ಯು ನಿಜ ಸಾ**
**ಹಸೈಕದೇಶಾನುಮರಣಮೆಮಗಕ್ಕೆ ಗಡಾ ॥**

ರನ್ನನ ದುರ್ಯೋಧನನು ಪುರುಷಕಾರದಿಂದ ಯುದ್ಧಮಾಡಿ ಹಲವು ದುಃಖಗಳನ್ನು ಅನುಭವಿಸಿ ಕೊನೆಗೆ ಪರಿಶುದ್ಧಾಂತಃಕರಣನಾಗುವನು; ದೈವದ ಮಹಿಮೆಯನ್ನು ಅರಿತುಕೊಳ್ಳುವನು. ಒಂದು ದೃಷ್ಟಿಯಿಂದ ಈ ಕಾವ್ಯಕ್ಕೆ ದುರ್ಯೋಧನನೇ ನಾಯಕನೆನಿಸುವನು. ಗದಾಯುದ್ಧದಲ್ಲಿ ಅವನ ವ್ಯಕ್ತಿತ್ವವು ಮೂಡಿದಹಾಗೆ ಭೀಮನ ವ್ಯಕ್ತಿತ್ವವು ಮೂಡುವುದಕ್ಕೆ ಅವಕಾಶವಾಗಿಲ್ಲ.

ಗದಾಯುದ್ಧದಲ್ಲಿ ರನ್ನನು ಸಿಂಹಾವಲೋಕನಕ್ರಮದಿಂದ ಇಡೀ ಮಹಾಭಾರತದ ಕಥೆಯನ್ನೇ ಹೇಳಿದ್ದಾನೆ; ಆದ್ದರಿಂದಲೇ

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲನೀ ಗದಾಯುದ್ಧದೊಳಂ
ತೊಳಕೊಂಡತ್ತೆನೆ ಸಿಂಹಾ
ವಳೋಕನಕ್ರಮದಿನಱಿಪಿದಂ ಕವಿರತ್ನಂ ||

ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ಆಯಾ ಪಾತ್ರಗಳೇ ತಮ್ಮ ಮನೋಭಾವಗಳನ್ನು ಸೂಕ್ಷ್ಮವಾಗಿ ಹೇಳಿಕೊಳ್ಳುವುದರಿಂದ ನಮ್ಮ ಕಣ್ಣೆದುರಿಗೆ ಒಂದು ನಾಟಕವನ್ನೇ ಕಟ್ಟಿದಂತಾಗುತ್ತದೆ. ಆದ್ದರಿಂದಲೇ ' ಶ್ರೀ 'ಯವರು ಗದಾಯುದ್ಧವನ್ನು ನಾಟಕ ರೂಪಕ್ಕೆ ತಿರುಗಿಸಲು ಸಾಧ್ಯವಾಯಿತು.

ಒಟ್ಟಿನಲ್ಲಿ ರನ್ನನ ರಸಪ್ರತಿಪಾದನೆ, ಶೈಲಿ, ಪಾತ್ರ ಪೋಷಣೆ, ಔಚಿತ್ಯಜ್ಞಾನಗಳು ಅನ್ಯಾದೃಶವಾದುವು. ಅರ್ಥೋಚಿತವಾದ ಪದಪ್ರಯೋಗ ರನ್ನನ ಒಡವೆ. ಅವನ ಶೈಲಿ ವೀರ್ಯವತ್ತಾದ ಶೈಲಿ. ಬಹುಶಃ ಪಂಪ ಕುಮಾರವ್ಯಾಸರು ಹೊರತಾಗಿ ಇನ್ನಾವ ಕನ್ನಡಕವಿಯೂ ಈ ವಿಷಯದಲ್ಲಿ ರನ್ನನನ್ನು ಸರಿಗಟ್ಟಲಾರನು. ರನ್ನನ ಯೋಗ್ಯತೆಯನ್ನು ಒಂದು ಮಾತಿನಲ್ಲಿ ಹೇಳಬೇಕಾದರೆ

ನೆಗೞ್ದ ಕವಿರತ್ನನಂತೊಳ
ಪುಗುವುದು ಮೊಗ್ಗಾಯ್ತು ಜಿನಮತಾಂಭೋಧಿಯುಮಂ
ಪುಗಲಾಗದಮಱಿವರ ಬಗೆ
ವುಗದೆ ಕೆಲರ್ ಕವಿಗಳಾಡಿದರ್ ತಡಿಪಡಿಯೊಳ್ ||

ಇದೇ ಕಾಲದಲ್ಲಿಯೇ ಚಾವುಂಡರಾಯನು ತನ್ನ ' ಚಾವುಂಡರಾಯಪುರಾಣ ' ವನ್ನು ಬರೆದನು. ಇದು ಜೈನ

ತೀರ್ಥಂಕರ ಚರಿತ್ರೆಯನ್ನೊಳಕೊಂಡ ಗದ್ಯಗ್ರಂಥ. ಕನ್ನಡದಲ್ಲಿ ಸಿಕ್ಕಿರುವ ಗದ್ಯಗ್ರಂಥಗಳಲ್ಲಿ ಇದೇ ಮೊದಲನೆಯದೆಂದು ಹೇಳುವುದುಂಟು. ಶಿವಕೋಟ್ಯಾಚಾರ್ಯನ 'ವೊಡ್ಡಾರಾಧಣ'ವು ಚಾವುಂಡರಾಯಪುರಾಣಕ್ಕಿಂತಲೂ ಪ್ರಾಚೀನವೆಂದು ಹೇಳಲು ಅವಕಾಶವಿದೆ. ವೊಡ್ಡಾರಾಧಣದ ಗದ್ಯ ಚಾವುಂಡರಾಯ ಪುರಾಣದ ಗದ್ಯಕ್ಕಿಂತಲೂ ಎಷ್ಟೋ ಉತ್ಕೃಷ್ಟವಾದದ್ದು. ಇದರಲ್ಲಿ ಹಲವು ಕಥೆಗಳನ್ನು ರಮ್ಯವಾದ ಶೈಲಿಯಲ್ಲಿ ನಿರೂಪಿಸಿದೆ. ಜಿನಸೇನ ಮತ್ತು ಗುಣಭದ್ರಕವಿಗಳು ಸಂಸ್ಕೃತದಲ್ಲಿ ಬರೆದಿರುವ "ಮಹಾಪುರಾಣ ಅಥವಾ ತ್ರಿಷಷ್ಟಿಶಲಾಕಾಪುರುಷ ಪುರಾಣ" ಎಂಬ ಗ್ರಂಥದ ಆಧಾರದಿಂದ ರನ್ನನ ಪೋಷಕನಾದ ಚಾವುಂಡರಾಯನು ತನ್ನ ಗ್ರಂಥವನ್ನು ಕನ್ನಡದಲ್ಲಿ ಬರೆದನು. ಈತನು ಗಂಗವಾಡಿಯ ಅರಸರಾಗಿದ್ದ ಮಾರಸಿಂಹ, ನಾಲ್ವಡಿ ರಾಚಮಲ್ಲ, ಮತ್ತು ರಕ್ಕಸಗಂಗರಾಚಮಲ್ಲರ ಆಳಿಕೆಗಳಲ್ಲಿ ಸುಮಾರು ಕ್ರಿಸ್ತಶಕ ೯೬೧ ರಿಂದ ೯೮೪ ರ ವರೆಗೆ ದಂಡನಾಯಕನೂ ಮಂತ್ರಿಯೂ ಆಗಿದ್ದಂತೆ ತಿಳಿಯುತ್ತದೆ. ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ಪ್ರತಿಮೆಯನ್ನು ಅಪರಿಮಿತ ಧನವ್ಯಯದಿಂದ ಮಾಡಿಸಿದ್ದಕ್ಕಾಗಿ ರಾಚಮಲ್ಲ ಸತ್ಯವಾಕ್ಯನು ಈತನಿಗೆ 'ರಾಯ' ಎಂಬ ಬಿರುದನ್ನು ಕೊಟ್ಟನಂತೆ. ಈತನು ಸ್ವಯಂ ಕಾವ್ಯವನ್ನು ಬರೆದುದೇ ಅಲ್ಲದೆ ಕವಿಪೋಷಕನೂ ಆಗಿದ್ದು ರನ್ನನಂಥ ಕವಿಯಿಂದ ಹಲವು ಗ್ರಂಥಗಳನ್ನು ಬರೆಯಿಸಿದನು.

ವೊಡ್ಡಾರಾಧಣ ಮತ್ತು ಚಾವುಂಡರಾಯಪುರಾಣ ಇವೆರಡೇ ಈ ಕಾಲದ ಗದ್ಯಗ್ರಂಥಗಳು. ಕನ್ನಡಿಗರು ಗದ್ಯದಲ್ಲಿ ಹೆಚ್ಚು ವ್ಯವಸಾಯ ನಡೆಸಿಲ್ಲ. ಹಿಂದಿನ ಕವಿಗಳು ಎಲ್ಲ ಕಾವ್ಯ

ಗಳನ್ನು ಹೆಚ್ಚಾಗಿ ಚಂಪೂರೂಪದಲ್ಲಿಯೇ ಬರೆದಿದ್ದಾರೆ. ಸಂಸ್ಕೃತದಲ್ಲಿ ಗದ್ಯರೂಪದಲ್ಲಿರುವ ಗ್ರಂಥಗಳನ್ನೂ ಚಂಪೂರೂಪವಾಗಿಯೇ ಕನ್ನಡಿಸಿದ್ದಾರೆ. ಇಷ್ಟೇ ಅಲ್ಲದೆ ಶಾಸ್ತ್ರಗ್ರಂಥಗಳನ್ನು ಬರೆಯುವಾಗಲೂ ಪದ್ಯವನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ. ನೃಪತುಂಗನ ' ಕವಿರಾಜಮಾರ್ಗ 'ವು ಪದ್ಯರೂಪದಲ್ಲಿದೆ. ನಾಗವರ್ಮನ ' ಛಂದೋಂಬುಧಿ ' ಯು ಪದ್ಯಗ್ರಂಥ. ಕೇಶಿರಾಜನೂ ತನ್ನ ' ಶಬ್ದಮಣಿದರ್ಪಣ ' ವನ್ನು ಪದ್ಯದಲ್ಲಿಯೇ ಬರೆದಿದ್ದಾನೆ. ಮತಗ್ರಂಥಗಳಿಗೆ ಟೀಕೆಗಳನ್ನು ಬರೆಯುವುದಕ್ಕೆ ಮಾತ್ರ ಗದ್ಯವು ಬೇಕಾಯಿತು. ಬಹುಶಃ ಗದ್ಯದ ಅಭಿವೃದ್ಧಿಗೆ ಈ ' ಟೀಕ ' ಗಳೇ ಆದಿಕಾರಣವೆಂದು ತೋರುತ್ತದೆ. ಚಂಪೂಕಾವ್ಯಗಳಲ್ಲಿ ಗದ್ಯವಿದೆ. ಆದರೆ ಅದರಲ್ಲಿ ಅಲಂಕಾರದಿಂದ ಕೂಡಿದ ಶೈಲಿಯೇ ಹೆಚ್ಚು. ವಿರೋಧಾಭಾಸ ಶ್ಲೇಷಗಳನ್ನು ತರಲು ಗದ್ಯವನ್ನು ಉಪಯೋಗಿಸಿದ್ದಾರೆ. ಗದ್ಯದ ಪ್ರಾಬಲ್ಯವು ಈಚೆಗೇ ಹೊರತು ಮೊದಲಿಗಿರಲಿಲ್ಲ.

ಈ ಕಾಲದಲ್ಲಿಯೇ ನಾಗವರ್ಮನು ' ಛಂದೋಂಬುಧಿ ' ಮತ್ತು ' ಕಾದಂಬರಿ ' ಎಂಬ ಎರಡು ಗ್ರಂಥಗಳನ್ನು ಬರೆದನು. ಕಾದಂಬರಿಯು ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಅನುವಾದ. ಬಾಣನು ಸಂಸ್ಕೃತದಲ್ಲಿ ಗದ್ಯವಾಗಿ ಬರೆದದ್ದನ್ನು ನಾಗವರ್ಮನು ಗದ್ಯಪದ್ಯಾತ್ಮಕವಾದ ಚಂಪೂರೂಪದಲ್ಲಿ ಬರೆದನು. ಕಾದಂಬರಿಯ ಕಥೆ ಬಹಳ ತೊಡಕು. ಈ ಕಾವ್ಯದಲ್ಲಿ ಪುಂಡರೀಕ ಮಹಾಶ್ವೇತೆಯರ ಪ್ರಣಯಕಥೆಯೂ ಕಾದಂಬರೀ ಚಂದ್ರಾಪೀಡರ ಪ್ರಣಯ ಕಥೆಯೂ ಹಾಸುಹೊಕ್ಕಾಗಿ ಸೇರಿಕೊಂಡು ಒಂದು ಕಥೆಯಾಗಿದೆ. ಕಾದಂಬರೀ ಮಹಾಶ್ವೇತೆಯರು ಅಪ್ಸರಸ್ತ್ರೀಯರು. ಅವರು ಒಲಿದ ಚಂದ್ರಾಪೀಡ,

ಪುಂಡರೀಕರು ದೇವತಾಂಶಸಂಭೂತರಾದರೂ ಮಾನವರು. ಇವರಿಬ್ಬರೂ ಶಾಪಗ್ರಸ್ತರಾಗಿ ಜನ್ಮಾಂತರಗಳನ್ನು ಪಡೆಯುತ್ತಾರೆ. ಎರಡು ಜನ್ಮಗಳು ಕಳೆದಮೇಲೆ ಅವರು ಕಾದಂಬರೀ ಮಹಾಶ್ವೇತೆಯರನ್ನು ಸೇರುತ್ತಾರೆ. ಈ ಕಥೆಯನ್ನೆಲ್ಲ ಕವಿಯು ತಾನೇ ಹೇಳದೆ ಅದರ ಬಹುಭಾಗವನ್ನು ಬೇರೆ ಬೇರೆ ಪಾತ್ರಗಳಿಂದ ಹೇಳಿಸುತ್ತಾನೆ. ಕಥೆಯ ಆರಂಭ ಅಂತ್ಯಭಾಗಗಳನ್ನು ಮಾತ್ರ ಕವಿಯೇ ಹೇಳುತ್ತಾನೆ. ಅಲ್ಲದೆ ಕಥೆಯನ್ನು ಮೊದಲಿನಿಂದ ಹೇಳದೆ ಮಧ್ಯದಿಂದ ಆರಂಭಿಸುತ್ತಾನೆ. ಕಾದಂಬರಿಯ ಕಥೆ ಇಷ್ಟು ತೊಡಕಾಗಿರುವುದಲ್ಲದೆ ಇದರಲ್ಲಿ ವರ್ಣನೆ ವಿಶೇಷವಾಗಿದೆ. ಕಥೆಗಿಂತ ವರ್ಣನೆಯೇ ಹೆಚ್ಚೆಂದು ಹೇಳಬಹುದು.

ನಾಗವರ್ಮನು ಸಾಧ್ಯವಾದ ಮಟ್ಟಿಗೂ ಸರಳವಾದ ಕನ್ನಡದಲ್ಲಿಯೇ ಗ್ರಂಥರಚನೆಮಾಡಿದ್ದಾನೆಂದು ಹೇಳಬೇಕು. ಇವನು ಪರಿವರ್ತನಮಾಡುತ್ತಿರುವುದು ಸಂಸ್ಕೃತಗದ್ಯಗ್ರಂಥ. ಅದರಲ್ಲಿ ಮಾರುದ್ದದ ಸಮಾಸಪದಗಳೂ ಹಲವಿರುತ್ತವೆ. ಆದ್ದರಿಂದ ನಾಗವರ್ಮನ ಸಂಸ್ಕೃತಪ್ರಯೋಗವು ಹೆಚ್ಚಲ್ಲ. ಒಟ್ಟಿನಲ್ಲಿ ಹೇಳಬಹುದಾದರೆ ನಾಗವರ್ಮನು:

ಸತ್ಕೃತಿ ಸಂಸ್ಕೃತದಿಂದೆ ಜ
ಗತ್ಕಾತುಕಮಾಗಿ ಮತ್ತೆ ಕರ್ಣಾಟದೊಳಂ
ಸತ್ಕವಿಸಿವಹಂ ಪೊಗಱೆ ಜ
ಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್ ||

ಎಂದು ಹೇಳಿರುವುದು ಸರಿಯಾಗಿಯೇ ಇದೆ.

ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ನಾಗಚಂದ್ರನೆಂಬ ಒಬ್ಬ ಕವಿಯು 'ರಾಮಚಂದ್ರ ಚರಿತಪುರಾಣ'

'ಮಲ್ಲಿನಾಥಪುರಾಣ' ಎಂಬ ಎರಡು ದೊಡ್ಡ ಕಾವ್ಯಗಳನ್ನು ಬರೆದಿದ್ದಾನೆ. ಇವನು ವಿಜಯಪುರವೆಂಬ ಊರಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿದನು. ಅವನು ಬರೆದ ಆ ಜಿನನ ಚರಿತ್ರೆಯೇ 'ಮಲ್ಲಿನಾಥಪುರಾಣ.' ಈತನು ತಾನೂ ಪಂಪನಹಾಗೆ ಬಹಳ ಲಲಿತವಾದ ಶೈಲಿಯಲ್ಲಿ ಕಾವ್ಯ ಬರೆದೆನೆಂಬ ಅಭಿಮಾನದಿಂದ 'ಅಭಿನವಪಂಪ' ಎಂದು ಅಡ್ಡಹೆಸರನ್ನಿಟ್ಟುಕೊಂಡಿದ್ದಾನೆ. ಆದ್ದರಿಂದಲೇ ಈತನು ಬರೆದ 'ರಾಮಚಂದ್ರಚರಿತಪುರಾಣ'ಕ್ಕೆ 'ಪಂಪರಾಮಾಯಣ'ವೆಂದೇ ಹೆಸರಾಗಿದೆ.

ಇದು ಜೈನರಾಮಾಯಣ. ವಾಲ್ಮೀಕಿರಾಮಾಯಣಕ್ಕೂ ಇದಕ್ಕೂ ಹಲವು ಭೇದಗಳಿವೆ. ಇದರಲ್ಲಿ ದಶರಥನ ಪುತ್ರಕಾಮೇಷ್ಟಿ ಮೊದಲಾದ ಯಜ್ಞಗಳ ಪ್ರಸ್ತಾಪವಾಗಲಿ, ವಿಶ್ವಾಮಿತ್ರ, ವಾಲ್ಮೀಕಿ, ವಸಿಷ್ಠ ಮೊದಲಾದ ಋಷಿಗಳ ಪ್ರಸ್ತಾಪವಾಗಲಿ ಇಲ್ಲ. ಇಲ್ಲಿನ ಹನುಮನು ವಿಮಾನದಲ್ಲಿ ಕುಳಿತು ಸಮುದ್ರವನ್ನು ದಾಟುವನೇ ಹೊರತು ಹಾರುವುದಿಲ್ಲ. ರಾವಣನನ್ನು ಕೊಲ್ಲುವವನು ಲಕ್ಷ್ಮಣನು, ರಾಮನಲ್ಲ. ಈ ರಾಮಾಯಣದಲ್ಲಿ ವಾಲಿಯು ವೈರಾಗ್ಯದಿಂದ ಸಂನ್ಯಾಸಿಯಾಗಿರುವನು. ಅವನು ರಾಮನಿಂದ ಹತನಾಗುವ ಪ್ರಸಂಗವೇ ಇಲ್ಲ. ಸುಗ್ರೀವನಿಗೆ ಹಿಂಸೆ ಕೊಟ್ಟವನು ಮಾಯಾಸುಗ್ರೀವನೇ ಹೊರತು ವಾಲಿಯಲ್ಲ. ಜನಸ್ಥಾನದಲ್ಲಿ ಸೀತೆಯು ಲಕ್ಷ್ಮಣನನ್ನು ನಿಂದಿಸುವ ಪ್ರಸಂಗವೂ ಈ ರಾಮಾಯಣದಲ್ಲಿಲ್ಲ.

ಈ ಎಲ್ಲ ವ್ಯತ್ಯಾಸಗಳಿಗಿಂತಲೂ ಮುಖ್ಯವಾದದ್ದೆಂದರೆ ರಾವಣನ ಪಾತ್ರರಚನೆ. ನಾಗಚಂದ್ರನ ರಾವಣನು ಬಹಳ ಯೋಗ್ಯನು, ಧರ್ಮಪರನು. ನಳಕೂಬರನ ರಾಜಧಾನಿಯಾದ

ದುರ್ಲಂಘ್ಯಪುರವನ್ನು ರಾವಣನು ಮುತ್ತಿದಾಗ ಅವನಲ್ಲಿ ಬಹಳ ಕಾಲದಿಂದ ಮೋಹಗೊಂಡಿದ್ದ ನಳಕೂಬರನ ಹೆಂಡತಿಯು ಅವನಲ್ಲಿಗೆ ದೂತಿಯನ್ನು ಕಳುಹಿಸುವಳು. ರಾವಣನು ಪುರ ಪ್ರವೇಶಕ್ಕೆ ಅವಳಿಂದ ಅವಕಾಶವನ್ನು ಕಲ್ಪಿಸಿಕೊಂಡರೂ ಅವಳಲ್ಲಿ ಕಾಮುಪರವಶನಾಗದೆ

> "ರಹಸ್ಯದಿಂದಾಕೆಯಂ ಕರೆದು, ನೀನ್ ವಿಶುದ್ಧಕುಲದ ಕುಲಸ್ತ್ರೀ ಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮುಂ ಬಗೆದು ಶೀಲಪರಿಪಾಲನಮಂ ಮಾಳ್ಪುದು, ಅಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ. ಪೆಱತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖವಿರು"

ಎಂದು ಆಕೆಗೆ ಧರ್ಮೋಪದೇಶಮಾಡಿ ನಳಕೂಬರನಲ್ಲಿಗೆ ಕಳುಹಿಸಿ ಅವನ ರಾಜ್ಯವನ್ನು ಹಿಂತಿರುಗಿ ಕೊಟ್ಟುಬಿಡುತ್ತಾನೆ. ಇಂಥಾ ಜಿತೇಂದ್ರಿಯನಾದ ರಾವಣನು

> "ಬಱಸಿಡಿಲ ಬಟ್ಟವಿಡಿದು ಪೋಳೆವ ಪೊಡು ಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ"

ಕಂಡು ಚಲಿತ ಮನಸ್ಕನಾಗುವನು; ತನ್ನ ಪರಾಂಗನಾವಿರತಿ ವ್ರತವನ್ನು ಮರೆಯುವನು :

> ಬಲಿ ವೃಷ್ಟಿಗೆ ವಜ್ರದ ಸಂ
> ಕಲೆ ಹೃದಯಕ್ಕೆನಿಸ ರೂಪವತಿ ಜಾನಕಿ ಕ
> ಣ್ಬೊಲದೊಳಿರೆ ಪದ್ಮಪತ್ರದ
> ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥

ಹೀಗೆ ದುರ್ಮೋಹಕ್ಕೆ ಸಿಕ್ಕಿ ಬಿದ್ದ ರಾವಣನು ತನ್ನ ಆಪ್ತರು ಹೇಳಿದ ಪಲವು ಹಿತೋಕ್ತಿಗಳನ್ನು ಅಲ್ಲಗಳೆದು ಸೀತೆ

ಯನ್ನು ಅಪಹರಿಸಿ ಲಂಕೆಯಲ್ಲಿ ಸೆರೆಯಲ್ಲಿಡುವನು. ಆದರೆ ಸೀತೆ ಅವನಿಗೆ ಒಲಿಯಲಿಲ್ಲ. ಕೊನೆಗೆ ರಾವಣನು ಸೀತೆಯನ್ನು ಹೆದರಿಸಿ ನೋಡಬೇಕೆಂಬ ಬಯಕೆಯಿಂದ ಅವಳ ಬಳಿಗೆ ಬಂದು "ಇಗೋ ಬಹುರೂಪಿಣೀ ವಿದ್ಯೆಯು ನನಗೆ ವಶವಾಯಿತು. ಇನ್ನು ನನ್ನನ್ನು ಪ್ರತಿಭಟಿಸಬಲ್ಲ ಶತ್ರುಪಕ್ಷವಿಲ್ಲ. ನಿನ್ನ ನಚ್ಚಿನ ರಾಮನ ಯೋಚನೆಯನ್ನು ಬಿಡು" ಎನ್ನುವನು. ಇದನ್ನು ಕೇಳಿ ಭಯವಿಹ್ವಲಳಾದ ಸೀತೆಯು "ರಾಮನ ಪ್ರಾಣಾಪಹರಣ ಮಾತ್ರ ಮಾಡಬೇಡ" ವೆಂದು ಪ್ರಾರ್ಥಿಸುತ್ತ ಮೂರ್ಛೆಬೀಳುವಳು. ಇದನ್ನು ನೋಡಿ ರಾವಣನು ತನ್ನ ಕ್ರೂರಕರ್ಮಕ್ಕೆ ಪಶ್ಚಾತ್ತಾಪಪಡುವನು. ಅವನಲ್ಲಿ ಸೀತೆಯ ವಿಷಯವಾಗಿ ದಯೆಯು ಅಂಕುರಿಸಿತು.

ರಾಮನನಗಲ್ಚಿ ತಂದಾ
ಸೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದಂ
ಕಾವ-ವ್ಯಾಮೋಹದಿನಾ
ಶ್ರಾಮುಖಮಂ ಪುದಿಯೆ ದುರ್ಯಶಃಪಟಹರವಂ ॥

ಎಂದು ದುಃಖಿಸುವನು. ಆದರೆ ದುರ್ದೈವದಿಂದ ಮತ್ತೆ ಅವನ ದುರಭಿಮಾನವೇ ಪ್ರಬಲವಾಗಿ ರಾಮನನ್ನು ಸೆರೆಹಿಡಿದು ತಂದು ಅವನಿಗೆ ಸೀತೆಯನ್ನೊಪ್ಪಿಸಬೇಕೇ ಹೊರತು ಈಗಲೇ ಸೀತೆಯನ್ನು ಅವನ ಬಳಿಗೆ ಕಳುಹಿಸಬಾರದೆಂದು ನಿಶ್ಚಯಿಸುವನು. ಆದರೆ ಈ ನಿಶ್ಚಯವನ್ನು ಸಾಧಿಸುವುದಕ್ಕಾಗದೆ ಅವನು ಯುದ್ಧ ಭೂಮಿಯಲ್ಲಿ ಸಾಯುವನು.

ಹೀಗೆ ನಾಗಚಂದ್ರನ ರಾವಣನು ದುರಂತನಾಯಕನಾಗಿದ್ದಾನೆ. ಅವನು ಬಹಳ ಸದ್ಗುಣಶಾಲಿ; ಜಿತೇಂದ್ರಿಯನು, ಪರಾಂಗನಾವಿರತಿವ್ರತವೆಂಬ ವ್ರತವನ್ನು ಬೇರೆ ಹಿಡಿದಿದ್ದನು.

ಅನೇಕ ಯುದ್ಧಗಳನ್ನು ಮಾಡಿದರೂ ಕರುಣಾಶಾಲಿ. ಇಷ್ಟು ಗುಣಗಳಿದ್ದರೂ ದೈವವಶದಿಂದ ಸೀತೆಯನ್ನು ನೋಡಿದಮಾತ್ರದಿಂದಲೇ ಕಾಮಪರವಶನಾಗಿಬಿಟ್ಟನು. ಇದು ದೈವಲೀಲೆಯೇ ಹೊರತು ಬೇರೆಯಲ್ಲವೆಂದು ತೋರುವಂತೆ ಕವಿ ಬರೆದಿದ್ದಾನೆ. ಈ 'ದುರಂತರಾವಣ'ನ ಚಿತ್ರವು ಪಂಪರಾಮಾಯಣಕ್ಕೆ ಒಂದು ಹೆಚ್ಚಿನ ಪ್ರಾಶಸ್ತ್ಯವನ್ನುಂಟುಮಾಡಿದೆ.

ಇದುವರೆಗೆ ಹೇಳಿದಂತೆ ಈ ಚಂಪೂಯುಗದಲ್ಲಿ ಹುಟ್ಟಿದ ಅನೇಕಗ್ರಂಥಗಳು ಮತಪ್ರಚಾರಕ್ಕೆಂದು ಹೊರಟವು. ಜೈನರ ತೀರ್ಥಂಕರ ಚರಿತ್ರೆಗಳೆಲ್ಲವೂ ಜೈನಧರ್ಮಪ್ರಚಾರಕ್ಕಾಗಿಯೇ ಹೊರತು ಬೇರೆಯಲ್ಲ. ಕಾವ್ಯರಚನೆಯನ್ನೇ ಪರಮೋದ್ದೇಶವಾಗಿ ಪಡೆದಿದ್ದಂಥ ಕವಿಗಳು ಕಡಮೆ. ಸುಮಾರು ಕ್ರಿಸ್ತಶಕ ೧೧೭೦ ರಲ್ಲಿದ್ದ ನೇಮಿಚಂದ್ರ, ೧೨೩೫ ರ ವೇಳೆಗೆ ಇದ್ದ ಆಂಡಯ್ಯ ಎಂಬ ಇಬ್ಬರು ಕವಿಗಳು ಬಲುಮಟ್ಟಿಗೆ ಮತಪ್ರಚಾರದ ಉದ್ದೇಶವಿಲ್ಲದ ಕಾವ್ಯಗಳನ್ನು ರಚನೆಮಾಡಿದ್ದಾರೆ. ನೇಮಿಚಂದ್ರನು 'ಲೀಲಾವತೀಪ್ರಬಂಧ'ವೆಂಬ ಚಂಪೂಕಾವ್ಯವನ್ನು ಬರೆದಿದ್ದಾನೆ. 'ಲೀಲಾವತಿ' ಸುಬಂಧುವಿನ "ವಾಸವದತ್ತೆ"ದ ಕಥೆಯನ್ನು ಅನುಸರಿಸುತ್ತದೆ. ಇದರಲ್ಲಿ ಜೈನಮತದ ಆವರಣವೂ ಇದೆ. ಕದಂಬರಾಜರ ರಾಜಧಾನಿಯಾದ ಜಯಂತೀಪುರ ಅಥವಾ ಬನವಾಸಿ ಎಂಬ ಪಟ್ಟಣದಲ್ಲಿ ಚೂಡಾಮಣಿ ಎಂಬ ರಾಜನಿದ್ದನು. ಈತನ ಮಹಿಷಿ ಪದ್ಮಾವತಿ. ಇವರ ಮಗ ಕಂದರ್ಪದೇವ. ಗುಣಗಂಧನೆಂಬ ಮಂತ್ರಿಯ ಮಗನಾದ ಮಕರಂದನು ಇವನ ಪ್ರಿಯಮಿತ್ರನು. ಕಂದರ್ಪನು ಯುವರಾಜಪಟ್ಟವನ್ನು ಹೊಂದಿ ಒಂದು ದಿನ ರಾತ್ರಿ ಕನಸಿನಲ್ಲಿ ಒಬ್ಬ ಸ್ತ್ರೀಯನ್ನು ಕಂಡು ಮರುದಿನ ಆ ಸ್ತ್ರೀಯಿರುವ ದಿಕ್ಕಿಗೆ ಮಕ

ರಂದನೊಡನೆ ಪ್ರಯಾಣಮಾಡುತ್ತಾನೆ. ಕುಸುಮಪುರವೆಂಬ ಪಟ್ಟಣದ ದೊರೆಯಾದ ಶೃಂಗಾರಶೇಖರನ ಮಗಳಾದ ಲೀಲಾವತಿಯನ್ನೇ ಈತನು ಸ್ವಪ್ನದಲ್ಲಿ ಕಂಡುದು. ಆಕೆಯೂ ಇವನನ್ನು ಸ್ವಪ್ನದಲ್ಲಿ ಕಂಡು ಇವನನ್ನು ಹುಡುಕಲು ಜನರನ್ನು ಕಳುಹಿಸುತ್ತಾಳೆ. ಬಳಿಕ ಇವರಿಬ್ಬರಿಗೂ ವಿವಾಹವಾಗಿ ಕಂದರ್ಪನು ಲೀಲಾವತಿಯನ್ನು ಕರೆದುಕೊಂಡು ಜಯಂತೀಪುರಕ್ಕೆ ಬಂದು ಸುಖವಾಗಿ ರಾಜ್ಯಭಾರಮಾಡುತ್ತಾನೆ. ಇದು 'ಲೀಲಾವತಿಯ' ಕಥೆ. ಈ ಗ್ರಂಥದಲ್ಲಿ ಶೃಂಗಾರಪರವಾದ ವರ್ಣನೆಗಳಿಗೇ ಹೆಚ್ಚು ಪ್ರಾಶಸ್ತ್ಯ.

ಆಂಡಯ್ಯನು ಸುಮಾರು ೧೨೩೫ ರಲ್ಲಿ ಜೀವಿಸಿದ ಕನ್ನಡ ಕವಿ. ಸಂಸ್ಕೃತ ಸಹಾಯವಿಲ್ಲದೆ ಕನ್ನಡದಲ್ಲಿ ಕಾವ್ಯವನ್ನು ರಚಿಸುವುದು ಅಸಾಧ್ಯವೆಂದೂ ಆದ್ದರಿಂದಲೇ ಪಂಪಾದಿ ಮಹಾಕವಿಗಳು ಮಿಶ್ರಭಾಷೆಯಲ್ಲಿ ಬರೆದರೆಂದೂ ಕೆಲವರು ಆಕ್ಷೇಪಿಸಲು ಆಂಡಯ್ಯನು ಅವರ ವಾದವನ್ನು ಸುಳ್ಳುಮಾಡುವುದಕ್ಕಾಗಿ 'ಕಬ್ಬಿಗರಕಾವ' ವನ್ನು ರಚಿಸಿದನೆಂದೂ ಪ್ರವಾದವಿದೆ. ಅದರಂತೆಯೇ ಈ ಕಾವ್ಯದಲ್ಲಿ ಸಂಸ್ಕೃತಪದಗಳ ಮಿಶ್ರಣವಿಲ್ಲ; ದೇಶ್ಯಪದ ತದ್ಭವಪದಗಳಿಂದಲೇ ರಚಿತವಾಗಿದೆ. ಈ ಕಾವ್ಯಕ್ಕೆ 'ಕಾವನ ಗೆಲ್ಲ' 'ಸೊಬಗಿನ ಸುಗ್ಗಿ' ಎಂಬ ಹೆಸರುಗಳೂ ಉಂಟು. ಇದರ ಕಥೆ ಮನ್ಮಥವಿಜಯ. ಆದ್ದರಿಂದಲೇ ಈ ಕಾವ್ಯಕ್ಕೆ 'ಕಾವನಗೆಲ್ಲ' ವೆಂದು ಹೆಸರು. ಕವಿಗಳಮೇಲೆ ಬಂದ ಅಪವಾದವು ಇದರಿಂದ ಹೋದದ್ದರಿಂದ ಇದಕ್ಕೆ 'ಕಬ್ಬಿಗರ ಕಾವ' ಎಂದು ಹೆಸರು. ಗ್ರಂಥ ಚಿಕ್ಕದು. ವಿಷಯ ಮಹತ್ತರವಾದುದಲ್ಲ.

ಹೀಗೆ ಒಬ್ಬಿಬ್ಬರು ಕವಿಗಳನ್ನು ಬಿಟ್ಟರೆ ಒಟ್ಟಿನಮೇಲೆ ಧರ್ಮಪ್ರಚಾರವೇ ಆಗಿನ ಕವಿಗಳ ಮುಖ್ಯೋದ್ದೇಶ. ಧಾರ್ಮಿಕ ಗ್ರಂಥಗಳ ಜತೆಗೆ ಹಲವು ಶಾಸ್ತ್ರ ಗ್ರಂಥಗಳೂ ಈ ಕಾಲದಲ್ಲಿ ಹುಟ್ಟಿದುವು. ಕೇವಲ ಭಾಷಾವ್ಯುತ್ಪತ್ತಿಗೆ ಸಾಧಕಗಳಾದ ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳನ್ನು ನಿರೂಪಿಸುವ ಗ್ರಂಥಗಳೇ ಅಲ್ಲದೆ ವೈದ್ಯ, ಗಣಿತ, ಜ್ಯೋತಿಷ, ಮೊದಲಾದ ಶಾಸ್ತ್ರಗಳಿಗೆ ಸಂಬಂಧಪಟ್ಟ ಗ್ರಂಥಗಳೂ ಹಲವು ಹುಟ್ಟಿದುವು.

ಈ ಕಾಲದ ಒಂದು ಪ್ರಧಾನ ಲಕ್ಷಣವೆಂದರೆ ಅನ್ಯಮತ ಸಹನೆ. ಹತ್ತು ಹನ್ನೊಂದನೆಯ ಶತಮಾನಗಳಲ್ಲಿ ರಚಿತವಾದ ಪುರಾಣಗಳಲ್ಲಿ ಅನ್ಯಮತ ದೂಷಣೆ ಕಾಣಿಸುವುದಿಲ್ಲ. ಹನ್ನೆರಡನೆಯ ಶತಮಾನದ ವೇಳೆಗೆ ಪರಧರ್ಮಗಳ ಕೆಲವು ಪದ್ಧತಿಗಳನ್ನು ಆಗಾಗ ಅಪಹಾಸ್ಯ ಮಾಡುವುದನ್ನು ಕಾಣಬಹುದು. ನಯಸೇನನು ತನ್ನ 'ಧರ್ಮಾಮೃತ' ವನ್ನು ಸ್ವಮತ ಪ್ರಚಾರಕ್ಕಾಗಿ ಬರೆದನು. ಆದರೆ ಅದು ಅನ್ಯಮತ ದೂಷಣೆಯಿಂದ ದೂರವಾಗಿಲ್ಲ. 'ಧರ್ಮಪರೀಕ್ಷೆ' ಯನ್ನು ಬರೆದ ಬ್ರಹ್ಮಶಿವನಿಗೂ 'ಸಮಯ ಪರೀಕ್ಷೆ' ಯನ್ನು ಬರೆದ ವೃತ್ತವಿಲಾಸನಿಗೂ ಇತರ ಮತಗಳನ್ನು ಅಪಹಾಸ್ಯಮಾಡುವುದೇ ಪ್ರಧಾನವಾದ ಉದ್ದೇಶವಾಗಿದ್ದಂತೆ ತೋರುತ್ತದೆ.

ಈ ಕಾಲದಲ್ಲಿ ಸಾಹಿತ್ಯವು ಕೇವಲ ರಾಜಾಸ್ಥಾನದಲ್ಲಿಯೇ ನೆಲಸಿತ್ತು. ಅದು ಸಾಮಾನ್ಯ ಜನರನ್ನು ಸೇರಿದಂತೆ ಕಾಣುವುದಿಲ್ಲ. ಗ್ರಂಥರಚನೆ ಮಾಡಿದವರಲ್ಲಿ ಕೆಲವರು ಸ್ವಯಂರಾಜರು, ಕೆಲವರು ದಂಡನಾಯಕರು, ಅಥವಾ ಮಂತ್ರಿಗಳು. ಉಳಿದವರು ಅವರ ಆಶ್ರಿತ ಕವಿಗಳು. ಕಾವ್ಯಗಳನ್ನು ಬರೆದದ್ದು ಪಂಡಿತ ರಂಜನೆಗೋಸ್ಕರ. ರಾಜಾಸ್ಥಾನದಲ್ಲಿನ ವಿದ್ವಾಂಸರಿಂದ

ಹೊಗಳಿಕೆಯನ್ನು ಪಡೆಯುವುದೇ ಈ ಕವಿಗಳ ಮನೋರಥ. ಈ ಕಾಲದ ಹಲವು ಗ್ರಂಥಗಳು ಸಂಸ್ಕೃತದ ಗ್ರಂಥಗಳ ಕನ್ನಡ ಅನುವಾದಗಳಾಗಿವೆ. ಮಿಕ್ಕವುಗಳ ವಸ್ತು ಬಹಳಮಟ್ಟಿಗೆ ಸಂಸ್ಕೃತ ಗ್ರಂಥಗಳಿಂದ ಆರಿಸಿಕೊಂಡದ್ದು. ವಿಷಯವು ಹೇಗೆ ಸಂಸ್ಕೃತದ್ದೋ ಹೇಳುವ ರೀತಿಯೂ ಹಾಗೆಯೇ ಸಂಸ್ಕೃತದ್ದು. ಸಂಸ್ಕೃತ ಛಂದಸ್ಸೇ ಈ ಕಾಲದ ಕವಿಗಳಿಗೆ ಮೆಚ್ಚಿಗೆಯಾಯಿತು. 'ರಗಳೆ'ಯನ್ನು ಅಲ್ಲಲ್ಲಿ ಉಪಯೋಗಿಸಿದ್ದಾರೆ, ನಿಜ. ಆದರೆ ಅದು ಮೆಚ್ಚಿಗಾಗಿ; ಅದರಲ್ಲೂ ಬರೆಯಬಲ್ಲೆವೆಂದು ತೋರಿಸಿಕೊಳ್ಳುವುದಕ್ಕಾಗಿ. ಅಷ್ಟೇ ಹೊರತು ಕನ್ನಡ ಛಂದಸ್ಸಿನಲ್ಲಿಯೇ ಗ್ರಂಥ ಬರೆಯಲು ಯಾವ ಕವಿಯೂ ಯತ್ನಿಸಿದಂತೆ ತೋರುವುದಿಲ್ಲ. ಭಾಷೆ ಸಂಸ್ಕೃತ ಸಮ್ಮಿಶ್ರವಾದ ಕನ್ನಡ. ಅನೇಕವೇಳೆ ಕನ್ನಡ ಪದ್ಯವನ್ನು ಬರೆಯ ಹೊರಟಿರುವೆವೆಂಬುದನ್ನೂ ಮರೆತು ಈ ಕವಿಗಳು ಸಂಸ್ಕೃತ ಶ್ಲೋಕಗಳನ್ನೇ ಬರೆದು ಬಿಡುವುದೂ ಉಂಟು. ಹೀಗೆ ಭಾಷೆ, ವಸ್ತು, ಛಂದಸ್ಸು, ಎಲ್ಲ ಭಾಗಗಳಲ್ಲಿಯೂ ಈ ಕಾಲದ ಕನ್ನಡ ಸಾಹಿತ್ಯವು ಸಂಸ್ಕೃತವನ್ನು ಅನುಸರಿಸಿದೆ.

ಆದರೆ ಒಂದು ಕೌತುಕ. ಒಂಬತ್ತನೆಯ ಶತಮಾನಕ್ಕೆ ಮೊದಲೇ ಸಂಸ್ಕೃತದಲ್ಲಿ ಅಶ್ವಘೋಷ, ಭಾಸ, ಕಾಳಿದಾಸ, ಶೂದ್ರಕ ಮೊದಲಾದ ಮಹಾಕವಿಗಳು ನಾಟಕಗಳನ್ನು ಬರೆದು ಪ್ರಚಾರಗೊಳಿಸಿದರು. ಈ ನಾಟಕಗಳಲ್ಲಿ ಹಲವನ್ನಾದರೂ ನಮ್ಮ ಕನ್ನಡ ಕವಿಗಳು ಓದಿರಬೇಕು. ರನ್ನಕವಿಯು ಭಟ್ಟನಾರಾಯಣನ 'ವೇಣೀಸಂಹಾರ' ವನ್ನು ಆಮೂಲಾಗ್ರವಾಗಿ ಓದಿದನೆಂದು ಹೇಳಲು ಆಧಾರವಿದೆ. ಹೀಗೆ ತಾವು ಓದಿದ ನಾಟಕಗಳನ್ನು ಕನ್ನಡದಲ್ಲಿ ಏಕೆ ಬರೆಯಲಿಲ್ಲವೋ

ತಿಳಿಯದು. ಇವರಿಗೆ ನಾಟಕಬರೆಯುವ ಸಾಮರ್ಥ್ಯವಿರಲಿಲ್ಲ ವೆಂದು ಹೇಳುವಂತಿಲ್ಲ. ಪಂಪರನ್ನರು ತಮ್ಮ ಕಾವ್ಯಗಳಲ್ಲಿ ಹಲವು ಸಂದರ್ಭಗಳನ್ನು ಬಹಳ ಸುಂದರವಾಗಿ, ಕಣ್ಮೆದುರಿಗೆ ನಡೆದಂತೆ, ನಾಟಕೀಯವಾಗಿ ವರ್ಣಿಸಿದ್ದಾರೆ. ಅವರು ಸಂಕಲ್ಪಿಸಿದ್ದರೆ ನಾಟಕರಚನೆ ಅವರಿಗೆ ಕಷ್ಟವಾಗುತ್ತಿರಲಿಲ್ಲ. ಆದರೂ ಇವರು ಯಾರೂ ನಾಟಕ ರಚನೆಗೆ ಏಕೆ ಪ್ರಯತ್ನಿಸಲಿಲ್ಲವೋ ಊಹಿಸುವುದು ಕಷ್ಟವಾಗಿದೆ.

ಸುಮಾರು ೧೧೭೦ ರಿಂದ ೧೨೩೫ ರ ಮಧ್ಯಕಾಲದಲ್ಲಿ ಜನ್ನ ಕವಿ ಕನ್ನಡದಲ್ಲಿ ಗ್ರಂಥರಚನೆ ಮಾಡಿದನು. ಈತನು ಹೊಯ್ಸಳವಂಶದ ವೀರಬಲ್ಲಾಳನೆಂದು ಪ್ರಸಿದ್ಧನಾದ ಗಿರಿದುರ್ಗ ಮಲ್ಲ, ಮತ್ತು ಅವನ ಮಗ ನರಸಿಂಹ—ಇವರ ಆಸ್ಥಾನ ಕವಿ. ಈತನಿಗೆ 'ಕವಿಚಕ್ರವರ್ತಿ' ಎಂಬ ಬಿರುದಿದೆ. ಈತನನ್ನು ಮಧುರ, ಕಮಲಭವ, ಆಂಡಯ್ಯ ಮೊದಲಾದ ಹಲವು ಕವಿಗಳು ಹೊಗಳಿದ್ದಾರೆ. ಪಂಪನಂತೆಯೇ ಜನ್ನನೂ ಕವಿ ಮಾತ್ರನಾಗಿರದೆ ಯುದ್ಧವೀರನೂ ಆಗಿದ್ದಂತೆ ತಿಳಿಯುತ್ತದೆ. ಇವನು 'ನಾಟ್ಯಪ್ರಭು'ವಾಗಿದ್ದನು.

ಇವನು 'ಯಶೋಧರಚರಿತ್ರೆ' 'ಅನಂತನಾಥಪುರಾಣ' ಗಳೆಂಬ ಎರಡು ಕಾವ್ಯಗಳನ್ನು ಬರೆದಿದ್ದಾನೆ. 'ಯಶೋಧರ ಚರಿತ್ರೆ' ಯಾವ ತೀರ್ಥಂಕರನ ಚರಿತ್ರೆಯನ್ನೂ ಹೇಳದಿದ್ದರೂ ನಾಲ್ಕು ಪುರಾಣಗಳಿಂದ ಆಗಲಾರದ ಧರ್ಮಪ್ರಚಾರವು ಇದೊಂದರಿಂದ ಆಗಿದೆ ಎಂಬುದರಲ್ಲಿ ಸಂಶಯವಿಲ್ಲ. ತೀರ್ಥಂಕರಚರಿತೆಗಳಲ್ಲಿರುವಂತೆ ಇದರಲ್ಲಿ ಉದ್ದವಾದ ಜನ್ಮಾಂತರ ಕಥೆಗಳಿಲ್ಲ; ಇರುವ ಅಲ್ಪಸ್ವಲ್ಪ ಜನ್ಮಾಂತರ ಕಥೆಯೂ ಕಥಾಭಾಗದಲ್ಲಿ ಬಹಳ ಚೆನ್ನಾಗಿ ಹೊಂದಿಕೊಂಡಿದೆ. ಅಲ್ಲದೆ ತೀರ್ಥಂಕರ

ಚರಿತ್ರೆಯನ್ನು ಬರೆಯುವಾಗ ಕವಿಗೆ ಇರುವ ಕೆಲವು ನಿರ್ಬಂಧಗಳು ಇಂಥ ಗ್ರಂಥಗಳನ್ನು ಬರೆಯುವಾಗ ಇರುವುದಿಲ್ಲ. ಕವಿಗೆ ಇಲ್ಲಿ ಹೆಚ್ಚು ಸ್ವಾತಂತ್ರ್ಯವಿದೆ. ಇದರಿಂದ ಅವನು ತನ್ನ ರಸಜ್ಞತೆಯನ್ನೂ ಕಥನಕೌಶಲವನ್ನೂ ಚೆನ್ನಾಗಿ ವ್ಯಕ್ತಪಡಿಸಬಹುದು.

"ಅಭಯರುಚಿ ಕುಮಾರಂ ಮಾರಿದತ್ತಂಗೆ ಹಿಂಸಾರಭಸಮತಿಗೆ ನೃಪಂ ಪೇಳ್ದು ಧರ್ಮಕ್ಕೆ ತಂದು" ಎಂಬುದು ಈ ಕಾವ್ಯದ ವಸ್ತು. ಕವಿಯ ಅಭಿಪ್ರಾಯದಂತೆ ಇದು ವ್ರತನಿಷ್ಠರಾದ ಶ್ರಾವಕರು ಪುಣ್ಯದಿನದಲ್ಲಿ ಪಾರಣೆಯಾದ ಮೇಲೆ ಕೇಳಿ ಸಂತೋಷಪಡುವುದಕ್ಕೆ ಯೋಗ್ಯವಾದ ಕಥೆ. ಅಂಥಾ ವೇಳೆಗಳಲ್ಲಿ ಜನರು ಧರ್ಮಪ್ರಬೋಧಕವಾದ ಕಥೆಗಳನ್ನು ಕೇಳುವುದಕ್ಕೆ ಆಸೆಪಡುವರೇ ಹೊರತು ಕೇವಲ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಕಥೆಗಳನ್ನಲ್ಲ. ಇದನ್ನು ಜನ್ನನೂ ಬಲ್ಲನು. ಆದ್ದರಿಂದ ಜೈನಧರ್ಮ ಪ್ರಚಾರ ಜನ್ನನ ಆಶಯಗಳಲ್ಲಿ ಪ್ರಧಾನವಾಗಿದ್ದಿತೆಂದು ತಿಳಿಯಬಹುದು.

ಒಂದು ಹಿಟ್ಟಿನ ಕೋಳಿಯನ್ನು ಬಲಿಕೊಟ್ಟ ವಧೆಯ ಸಂಕಲ್ಪಮಾತ್ರದಿಂದ ಆದ ದುಃಖಪರಂಪರೆಗಳನ್ನು ಚಿತ್ರಿಸಿ ಜನ್ನನು ಅಹಿಂಸೆಯ ಶ್ರೇಷ್ಠತೆಯನ್ನು ಸೂಚಿಸಿದ್ದಾನೆ. ಗ್ರಂಥದ ಯಾವ ಭಾಗದಲ್ಲಿಯೂ ಜೈನಧರ್ಮ ಬಲು ಮೇಲೆಂದಾಗಲಿ, ಇತರ ಧರ್ಮಗಳು ಕೀಳೆಂದಾಗಲಿ ಉಪನ್ಯಾಸ ಮಾಡುವುದಿಲ್ಲ; ಕೇವಲ ಕಥಾಸಂದರ್ಭದಿಂದಲೇ ದಯಾಗುಣದ ಮಹಿಮೆಯನ್ನು ನಿರೂಪಿಸಿದ್ದಾನೆ.

ಕವಿಯು ಪಾತ್ರಪೋಷಣೆಯನ್ನಾಗಲಿ, ವರ್ಣನೆಯನ್ನಾಗಲಿ ಅಲಕ್ಷ್ಯಮಾಡಿಲ್ಲ; ಯಶೋಧರ, ಚಂದ್ರಮತಿ ಮುಂತಾ

ದವರ ಪಾತ್ರಗಳನ್ನು ಅವನು ಪೋಷಿಸಿರುವ ರೀತಿಯು ಬಹಳ ಹಿತವಾಗಿದೆ. ಈ ಕಾವ್ಯದಲ್ಲಿ ಬರುವ ಮಾರಿಗುಡಿಯ ವರ್ಣನೆಯನ್ನು ಒಂದುಸಲ ಓದಿದರೂ ಸಾಕು, ಎಂದೆಂದಿಗೂ ಮನಸ್ಸಿನಲ್ಲಿ ನಿಂತುಬಿಡುತ್ತದೆ:

ತಳಮಾಸುಡಿದಿಡುವ ಕಣ್ಣಂ
ಕಳಿದೇಱಿಪ ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಿಂ ಕೂ
ಟ್ಗಳನಡಿಸುವ ಬೀರರೆತ್ತ ನೋಡಿಡಮುದಱೊಳ್ ॥

ಆಡು ಕುಱಿ ಕೋೞಿ ಕೋಣನ
ಕೂಡಿದ ಹಿಂಡೊಳಱಿ ಪೆಳಱಿ ಮಾರ್ದನಿಯಿಂದಂ
ಕೂಡೆ ವನವಾಟ್ದು ದುರ್ವರೆ
ಬೀಡೆಯಿನೆರ್ದೆಯೊಡೆದುದವಱ ಕೋಟಲೆಗಾಗಳ್ ॥

ದೆಸೆದೆಸೆಗೆ ನರಶಿರಂ ತೆ
ತ್ತಿಸಿ ಮೆಱೆದುವು ಮುಗಿಲೊಳಟ್ಟೆ ಪೇರಡಗಿನ ಪೆ
ರ್ಚಿಸನದೆ ಪೊಱಗಣ ಜೀವ
ಪ್ರಸರಮುಮಂ ಪಲವು ಮುಖದಿನವಲೋಕಿಪವೋಲ್ ॥

ಒಟ್ಟಿನಲ್ಲಿ ಜನ್ನನ ವರ್ಣನಾಕುಶಲತೆ, ಕಥೆ ಹೇಳುವ ಒಂದು ನೈಪುಣ್ಯ, ಪಾತ್ರರಚನೆ ಇವು ಅವನ ' ಕವಿಚಕ್ರವರ್ತಿ ' ಎಂಬ ಬಿರುದಿಗೆ ಸಾರ್ಥಕ್ಯವನ್ನು ಕಲ್ಪಿಸುತ್ತವೆ.

# ಸ್ವಾತಂತ್ರ್ಯ ಯುಗ

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಸ್ವಾತಂತ್ರ್ಯ ಯುಗವು ಪ್ರಾರಂಭವಾಯಿತೆಂದು ಹೇಳಬಹುದು. ಇದುವರೆಗೆ ಕನ್ನಡ ಕವಿಗಳೆಲ್ಲರೂ ಸಂಸ್ಕೃತ ಸಾಹಿತ್ಯದಿಂದ ಸಾರಸಂಗ್ರಹ ಕಾರ್ಯದಲ್ಲಿ ತೊಡಗಿದ್ದರು; ಸಂಸ್ಕೃತ ಕವಿಗಳನ್ನು ಅನುಕರಣಮಾಡುತ್ತಿದ್ದರು. ಸಂಸ್ಕೃತದಲ್ಲಿ ಉತ್ತಮ ಕಾವ್ಯಗಳಾದ ರಾಮಾಯಣ ಭಾರತಗಳನ್ನು ಕನ್ನಡದಲ್ಲಿ ಬರೆದರು. ಜೈನಮತಪ್ರವಿಷ್ಟರಾದವರಿಗೆ ಇಷ್ಟವಾದ ತೀರ್ಥಂಕರ ಚರಿತ್ರೆಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಹಾಕಿದರು. ಅಲ್ಲದೆ ಆ ಕಾಲದ ಕಾವ್ಯಗಳೆಲ್ಲ ಚಂಪೂಗ್ರಂಥಗಳು. ಸಂಸ್ಕೃತ ಛಂದಸ್ಸನ್ನೇ ಆಶ್ರಯಿಸಿ ವೃತ್ತ ಕಂದಗಳನ್ನೇ ಹೆಚ್ಚಾಗಿ ಬಳಸಿದರು. ಯಾರೂ ಕನ್ನಡ ಛಂದಸ್ಸನ್ನು ಬಳಕೆಗೆ ತರಲಿಲ್ಲ. ಹೀಗೆ ವಸ್ತು ರೀತಿಗಳೆರಡೂ ಸಂಸ್ಕೃತವನ್ನೇ ಆಶ್ರಯಿಸಿದ್ದುವು.

ಹನ್ನೆರಡನೆಯ ಶತಮಾನದ ವೇಳೆಗೆ ಪರಿಸ್ಥಿತಿ ವ್ಯತ್ಯಾಸವಾಯಿತು. ಸುಮಾರು ಕ್ರಿಸ್ತಶಕ ೧೧೬೦ ರ ವೇಳೆಗೆ ಪ್ರಸಿದ್ಧಿಗೆ ಬಂದ ಬಸವಣ್ಣನು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹಾದಿಯನ್ನು ಹಾಕಿ ಕೊಟ್ಟನು. ಈತನ ಉದ್ದೇಶವು ಮತ ಪ್ರಚಾರವೇ ಹೊರತು ಕಾವ್ಯರಚನೆಯಲ್ಲ. ಆದರೆ ಜನತೆಯಲ್ಲಿ ಯಾವ ಪ್ರಚಾರವಾಗಬೇಕಾದರೂ ಅವರಿಗೆ ತಿಳಿಯುವ ಸುಲಭ ಭಾಷೆಯ ಲಲಿತ ಮಾರ್ಗದಲ್ಲಿಯೇ ಆಗಬೇಕೆಂಬುದನ್ನು ಅರಿತ ಬಸವಣ್ಣನು ತನ್ನ ಧರ್ಮಬೋಧೆಯೆಲ್ಲವನ್ನೂ ವಚನಗಳೆಂಬ, ಸಾಮಾನ್ಯ ಜನರಿಗೂ ಅರ್ಥವಾಗುವ, ಕಾವ್ಯರೀತಿಯಲ್ಲಿ ರಚಿಸಿದನು. ಈ ವಚನಗಳು ಸುಂದರವೂ ಮನೋಮೋಹಕವೂ

ಆಗಿವೆ. ಆದ್ದರಿಂದ ಮತಪ್ರಚಾರಕ್ಕೆ ಹೊರಟ ಬಸವಣ್ಣನಿಂದ ಸಾಹಿತ್ಯಾಭಿವೃದ್ಧಿಯೂ ವಿಶೇಷವಾಗಿ ಆಯಿತು.

ಬಸವಣ್ಣನ ವಚನಗಳಲ್ಲಿ ಹಲವು ಆಗಿನ ಸಾಮಾಜಿಕ ಸ್ಥಿತಿಗತಿಗಳನ್ನು ವಿವರಿಸುತ್ತವೆ. ಅಲ್ಲದೆ ಬಸವಣ್ಣನ ವ್ಯಕ್ತಿತ್ವವನ್ನೂ ಅವನ ಜೀವನದ ಅನುಭವಗಳನ್ನೂ ನಿರೂಪಿಸುವ ಹಲವು ವಚನಗಳೂ ಇವೆ. ಇವು ಆತನ ಆತ್ಮಕಥೆಯಂತೆ ಇವೆ. ಬಸವಣ್ಣನ ವಚನಗಳು ಜೀವನದ ನಾನಾ ಸಮಸ್ಯೆಗಳನ್ನು ಚರ್ಚಿಸುವುದರಿಂದ ಉತ್ತಮ ಸಾಹಿತ್ಯವೆನಿಸಿಕೊಳ್ಳಲು ಅರ್ಹವಾಗಿವೆ.

ವಚನಗಳ ಭಾಷೆ ಬಹಳ ತಿಳಿ. ಅನಾವಶ್ಯಕವಾದ, ಕ್ಲಿಷ್ಟವಾದ, ಸಂಸ್ಕೃತದ ಮಿಶ್ರಣವಿಲ್ಲ, ವಾಗಾಡಂಬರವಿಲ್ಲ. ಏತಕ್ಕೆಂದರೆ ಪಂಡಿತ ರಂಜನೆಗಾಗಿ, ರಾಜಾಸ್ಥಾನಗಳಿಗಾಗಿ ಅವು ರಚಿತವಾಗಲಿಲ್ಲ. ಸಾಮಾನ್ಯ ಜನರನ್ನು ಸೇರಬೇಕಾದರೆ ಭಾಷೆಯು ಬಹಳ ಸುಲಭವಾಗಿರಲೇ ಬೇಕಷ್ಟೆ. ಇವು ಹಲವು ನಾಣ್ಣುಡಿಗಳನ್ನೊಳಕೊಂಡು ಹೃದಯಂಗಮವಾಗಿವೆ. ವಚನ ಸಾಹಿತ್ಯದ ರೀತಿ ಸಂಪೂರ್ಣವಾಗಿ ಕನ್ನಡಕ್ಕೆ ಸೇರಿದ್ದು. ಸಂಸ್ಕೃತದ ಅನುಕರಣ ಸ್ವಲ್ಪವೂ ಇಲ್ಲ. ಈ ವಚನಗಳು ಬಹಳಮಟ್ಟಿಗೆ ಗದ್ಯದಂತೆಯೇ ಇದ್ದರೂ ಕೆಲವು ಹಾಡುವುದಕ್ಕೂ ಬರುತ್ತವೆ. ಆಗಾಗ ಜಂಗಮರು ವಚನಗಳನ್ನು ತಮ್ಮ ಏಕನಾದದ ಶ್ರುತಿಯೊಂದಿಗೆ ಹಾಡುವುದೂ ಉಂಟು. ಗಹನವಾದ ತತ್ವಗಳನ್ನು ಉಪದೇಶಿಸುವ ಹಲವು ವಚನಗಳಿಂದ ಅಚ್ಚಕನ್ನಡದ ಶಕ್ತಿಯನ್ನು ಕಂಡುಕೊಳ್ಳಬಹುದಾಗಿದೆ. ಅನೇಕ ವಚನಗಳು ಆಶುಕವಿತ್ವಗಳು; ಆಯಾ ಸಂದರ್ಭದಲ್ಲಿ ತೋರಿದ ಅಭಿಪ್ರಾಯಗಳನ್ನು ಹೇಳುತ್ತವೆ.

ಹಲಗೆ ಬಳಪಗಳನ್ನು ಹಿಡಿಯುವ ಅಗ್ಗಳಿಕೆ ಬಹುಶಃ ಬಸವಣ್ಣನಿಗೂ ಸಲ್ಲುತ್ತದೆ.

ಯಾರೋ ಯಜ್ಞಕ್ಕಾಗಿ ಮೇಕೆಯನ್ನು ಹಿಡಿದುಕೊಂಡು ಹೋಗುತ್ತಿರುವುದನ್ನು ಕಂಡು ಬಸವಣ್ಣನು ದಯಾಪರನಾಗಿ ಹೇಳುವ ಈ ವಚನವನ್ನು ಕೇಳಿ :

> "ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ ಹೋತೇ ಅಳು ಕಂಡೆಯಾ. ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೇ! ಶಾಸ್ತ್ರವನೋದಿದವರ ಮುಂದೆ ಅಳು ಕಂಡೆಯಾ ಹೋತೇ! ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲ ಸಂಗಮದೇವನವರ."

ಜನರು ಶಿವನನ್ನು ಪೂಜಿಸದೆ ಹಲವು ದೇವರುಗಳನ್ನು ನಂಬಿಕೊಂಡಿರುವರೆಂಬ ಅಭಿಪ್ರಾಯವು ಬಹಳ ಸ್ವಾರಸ್ಯವಾಗಿ ನಿರೂಪಿತವಾಗಿದೆ.

> "ಅರಗು ತಿಂದು ಕರಗುವ ದೈವ ಉರಿ ಕಂಡರೆ ಮುರುಟುವ ದೈವವ ಎಂತು ಸರಿಯೆಂಬೆನಯ್ಯಾ? ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ? ಸಹಜಭಾವದ ನಿಜೈಕ್ಯಸ್ಥಿರರೂಪ ನಿರ್ವಿಕಾರ ನಿರಂಜನ ಕೂಡಲಸಂಗಮದೇವನೊರ್ವನೇ ದೇವ ಕಾಣಿರೋ."

ಬಸವಣ್ಣನು ತಾನು ಇನ್ನೂ ಭಕ್ತಿಸಾಧನೆಯಲ್ಲಿದ್ದಾಗಿನ ಅನುಭವಗಳನ್ನು ಕೆಲವು ವಚನಗಳಲ್ಲಿ ವರ್ಣಿಸಿದ್ದಾನೆ. ಮಾದರಿಗೆ ಇಲ್ಲಿ ಕೆಲವನ್ನು ಬರೆಯುತ್ತೇವೆ.

> "ಮರನನೇರಿದ ಮರ್ಕಟನಂತೆ ಹಲವು ಕೊಂಬಿಂಗೆ ಹಾಯುತ್ತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ! ಎಂತು

ನೆಚ್ಚುವೆನಯ್ಯಾ! ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ."

ಹೀಗೆ ಚಪಲಚಿತ್ತತೆ, ವಿಷಯಸುಖಾಪೇಕ್ಷೆ, ಮೊದಲಾದುವುಗಳನ್ನು ಗೆದ್ದು ಭಕ್ತಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವಾಗಲೇ ತನ್ನವರು ವಿಶೇಷವಾಗಿ ಹೊಗಳಿದರಂತೆ. ಈ ಹೊಗಳಿಕೆ ಬಸವಣ್ಣನ ಮನಸ್ಸಿಗೆ ಸರಿಹೋಗಲಿಲ್ಲ.

"ಎನ್ನವರೊಲಿದು ಹೊನ್ನ ಶೂಲದೊಳಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳಿಕೆ ಎನ್ನ ಮೈಗೊಂಡಿತಲ್ಲಾ, ಅಯ್ಯೋ ನೊಂದೆನು. ನೊಂದೆನು. ಸೈರಿಸಲಾರೆನು. ಕೂಡಲ ಸಂಗಮದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗಳಿಕೆಗಡ್ಡ ಬಾರಾ ಧರ್ಮಿ.

ಈ ವಚನಗಳಲ್ಲಿ ಬಸವಣ್ಣನ ವಿನಯ, ಭಕ್ತಿ, ವೈರಾಗ್ಯಗಳನ್ನು ಕಾಣಬಹುದು :

"ಎನ್ನ ಯೋಗಕ್ಷೇಮ ನಿಮ್ಮದಯ್ಯಾ. ಎನ್ನ ಹಾನಿವೃದ್ಧಿ ನಿಮ್ಮದಯ್ಯಾ. ಎನ್ನ ಮಾನಾಪಮಾನ ನಿಮ್ಮದಯ್ಯಾ. ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ.''

ಹೀಗೆ ತನ್ನ ಸುಖದುಃಖಗಳನ್ನೆಲ್ಲ ಶಿವನಿಗೆ ಅರ್ಪಿಸಿ ಬಸವಣ್ಣ ಶರಣನಾದನು; ಶಿವಸಾಕ್ಷಾತ್ಕಾರವನ್ನು ಹೊಂದಿದನು. ತರುವಾಯ ಜನರಿಗೆ ಧರ್ಮೋಪದೇಶಕ್ಕೆ ಮೊದಲು ಮಾಡಿದನು. ಷಟ್ಸ್ಥಲಸಿದ್ಧಾಂತವನ್ನು ಜನರಿಗೆ ಉಪದೇಶಿಸಿ ಲಿಂಗೈಕ್ಯಸಾಧನೆಗೆ ಹಾದಿತೋರಿಸಿದನು. ಭಕ್ತರ ಕರ್ತವ್ಯಗಳನ್ನು ನಿರೂಪಿಸಿದನು. ಲಿಂಗಾರ್ಚನೆ, ಜಂಗಮಾರಾಧನೆ ಇವು ಭಕ್ತರ ಮುಖ್ಯಕರ್ತವ್ಯಗಳು. ಅವುಗಳನ್ನು ಕುರಿತು ಹೇಳುತ್ತ ಜಂಗಮರ ಪ್ರಾಶಸ್ತ್ಯವನ್ನು ಪ್ರಕಟಿಸಿದನು :

"ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆಗೊರಚೆ ಚಿಪ್ಪುಗಳ ಕಾಣಬಹುದು. ನಮ್ಮ ಕೂಡಲ ಸಂಗನಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು."

ಬಸವಣ್ಣನು "ಜಂಗಮವೇ ಲಿಂಗ" ವೆಂದು ಸಾರಿದನು. "ತಳಕ್ಕೆ ನೀರೆರೆದರೆ ಮೇಲೆಪಲ್ಲವಿಸಿತ್ತು ನೋಡಾ" ಎಂದು ಒಂದು ಸುಂದರವಾದ ಉಪಮಾನವನ್ನು ಹೇಳಿ ಜಂಗಮಾರಾಧನೆಯೇ ಭಕ್ತನ ಪರಮ ಕರ್ತವ್ಯವೆಂದೂ ಅದರಿಂದಲೇ ಶಿವನು ತೃಪ್ತ ನಾಗುವನೆಂದೂ ಬಸವಣ್ಣನು ಸಾರಿದನು. ಇದರಿಂದ ಹಲವು ಮಂದಿ ಜಂಗಮರಿಗಾದರೂ ತಲೆ ತಿರುಗಿರಬೇಕು. ಅವರಿಗೆ ಬಸವಣ್ಣನು ಬುದ್ಧಿ ಹೇಳದೆಯೂ ಬಿಟ್ಟಿಲ್ಲ. ಅಲ್ಲದೆ ಜಂಗಮರು ಭಿಕ್ಷಾಟನೆಯನ್ನೇ ನೆಚ್ಚಿಕೊಂಡು ಸ್ವಾವಲಂಬಿಗಳಾಗದೆ ಕೆಡ ಬಾರದೆಂಬ ಯೋಚನೆಯಿಂದ "ಕಾಯಕವ ಮಾಡಿರಣ್ಣ, ಕಾಯಕವೇ ಕೈಲಾಸ" ಎಂದು ನುಡಿದನು.

ಶಿವಭಕ್ತರಿಗೆ, ಜಂಗಮರಿಗೆ ಮಾತ್ರವೇ ಅಲ್ಲದೆ ಇತರ ರಿಗೂ ಅನ್ವಯಿಸುವ, ಸಾರ್ವಕಾಲಿಕವಾದ ನೀತಿಯನ್ನೂ ಬಸವಣ್ಣ ತನ್ನ ವಚನಗಳಲ್ಲಿ ಒಮ್ಮೆಗೇ ಹೃದಯವನ್ನು ಹೊಗುವ ಭಾಷೆಯಲ್ಲಿ ಉಪದೇಶಿಸಿದ್ದಾನೆ. ಕೇವಲ ದೇವರ ನಾಮಸ್ಮರಣೆಯಿಂದಲೇ ಧನ್ಯನಾದನೆಂದು ಭಾವಿಸುವುದು ಹೆಡ್ಡತನವೆಂಬ ಅಭಿಪ್ರಾಯವು ಈ ವಚನದಲ್ಲಿ ಗರ್ಭಿತವಾಗಿದೆ:

"ಕರಿಕ ಕಂಚನ ನೆನೆದಡೆ ಕಂಚನಾಗಬಲ್ಲನೆ? ದರಿದ್ರ ಸಿರಿವಂತನಾಗ ಬಲ್ಲನೆ? ಮುನ್ನಿನ ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವಾ."

ದೇವರ ಪ್ರೀತಿಯನ್ನು ಪಡೆಯುವ ಮಾರ್ಗವನ್ನು ಕೇಳಿ—

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ. ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವನನೊಲಿಸುವ ಪರಿ"

ಬಸವಣ್ಣನ ಸಮಕಾಲೀನರನೇಕರು ವಚನಕಾರರಾದರು. ಅಲ್ಲಮಪ್ರಭು, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ ಮೊದಲಾದ ಶಿವಶರಣರು ವಚನಗಳನ್ನು ರಚಿಸಿದ್ದಾರೆ. ಹೆಂಗಸರೂ ವಚನಕಾರರಾಗಿದ್ದಾರೆ. ಬಹುಶಃ ಈ ಕಾಲದಲ್ಲಿದ್ದಷ್ಟು ಕವಿಗಿತಿಯರು ಕನ್ನಡದಲ್ಲಿ ಇನ್ನು ಯಾವಾಗಲೂ ಇದ್ದಿರಲಾರರು. ಇಂಥ ವಚನಕಾರ್ತಿಯರ ಪೈಕಿ ಅಕ್ಕ ಮಹಾದೇವಿಯು ಪ್ರಮುಖಳಾದವಳು.

ಈ ವಚನಕಾರರೆಲ್ಲರೂ ಸಾಮಾನ್ಯವಾಗಿ ತಮ್ಮ ಇಷ್ಟ ದೇವತೆಯ ಅಂಕಿತದಲ್ಲಿ ತಮ್ಮ ವಚನಗಳನ್ನು ನುಡಿದಿದ್ದಾರೆ.

ಹೀಗೆ ವೀರಶೈವ ವಚನಸಾಹಿತ್ಯವು ಹುಲುಸಾಗಿ ಬೆಳೆಯುತ್ತಿರಲು ಸುಮಾರು ೧೨೦೦ ರ ವೇಳೆಗೆ ಹಂಪೆಯಲ್ಲಿ ಹರಿಹರ ಕವಿಯು ಪ್ರಸಿದ್ಧಿಗೆ ಬಂದನು. ಈತನು 'ಗಿರಿಜಾ ಕಲ್ಯಾಣ' ವೆಂಬ ಚಂಪೂಗ್ರಂಥವನ್ನು ಬರೆದಿದ್ದರೂ 'ರಗಳೆಯ ಕವಿ' ಯೆಂದೇ ಪ್ರಸಿದ್ಧನಾಗಿದ್ದಾನೆ. ಏಕೆಂದರೆ ಈತನು ಶಿವಶರಣರ ಚರಿತ್ರೆಗಳನ್ನೆಲ್ಲ ರಗಳೆಯ ಛಂದಸ್ಸಿನಲ್ಲಿ ಬರೆದಿದ್ದಾನೆ. 'ಬಸವರಾಜದೇವರ ರಗಳೆ' ಮೊದಲಾದ ದೀರ್ಘವಾದ ಕೃತಿಗಳಲ್ಲಿ ಒಂದು ಅಧ್ಯಾಯ ಗದ್ಯ, ಒಂದು ಅಧ್ಯಾಯ ರಗಳೆ, ಹೀಗೆ ಇದೆ. ಪುಷ್ಪರಗಳೆ, ಪ್ರಭುದೇವರ ರಗಳೆ, ಮುಂತಾದ ಚಿಕ್ಕ

ಕಾವ್ಯಗಳನ್ನು ಹರಿಹರನು ಪೂರ್ಣವಾಗಿ 'ರಗಳೆ' ಯಲ್ಲಿಯೇ ಬರೆದಿದ್ದಾನೆ. ಹೀಗೆ ಕನ್ನಡದಲ್ಲಿ ಇಡೀ ಗ್ರಂಥವನ್ನೇ ರಗಳೆಯ ಛಂದಸ್ಸಿನಲ್ಲಿ ಬರೆಯಲು ಬಹುಶಃ ಇದೇ ಮೊದಲು. ಆದ್ದರಿಂದಲೇ ಹರಿಹರನಿಗೆ "ರಗಳೆಯ ಕವಿ" ಯೆಂಬ ಹೆಸರು ಬಂದದ್ದು. ಈ ಕನ್ನಡದ ಛಂದಸ್ಸನ್ನು ಬಳಕೆಗೆ ತಂದು ಕನ್ನಡ ಸಾಹಿತ್ಯವಾಹಿನಿಗೆ ಒಂದು ಹೊಸ ಕಾಲುವೆಯನ್ನು ತೋಡಿದ ಕೀರ್ತಿ ಹರಿಹರನಿಗೆ ಸಲ್ಲತಕ್ಕದ್ದು. ಓದುಗರಲ್ಲಿ ಭಕ್ತಿಯ ಉದ್ರೇಕವಾಗುವಂತೆ ಬರೆಯಬಲ್ಲವನು ಹರಿಹರ. ಆಮೇಲೆ ಬಂದ ಅನೇಕ ವೀರಶೈವ ಕವಿಗಳಿಗೆ ಅವನು ಮಾದರಿಯಾದನು.

ಹಂಪೆಯ ಹರಿಹರನ ಸೋದರಳಿಯನೂ ಶಿಷ್ಯನೂ ಆದ ರಾಘವಾಂಕನು ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಸೋಮನಾಥ ಚರಿತೆ ಮುಂತಾದ ಕಾವ್ಯಗಳನ್ನು ಬರೆದು ಕನ್ನಡ ಛಂದಸ್ಸಾದ ಷಟ್ಪದಿಯನ್ನು ಬಳಕೆಗೆ ತಂದನು. ಈತನು ಇನ್ನೂ ಮೂರು ಗ್ರಂಥಗಳನ್ನು ಬರೆದಿರುವುದಾಗಿ ತಿಳಿದುಬಂದಿದೆ. ಆದರೆ ಅವು ಸಿಕ್ಕಿಲ್ಲ. ಈಗ ದೊರೆತಿರುವ ಗ್ರಂಥಗಳಲ್ಲಿ ಹರಿಶ್ಚಂದ್ರ ಕಾವ್ಯವು ಬಹಳ ಪ್ರಸಿದ್ಧವಾಗಿದೆ. ರಾಘವಾಂಕನು ಸಂಸ್ಕೃತದಲ್ಲಿಯೂ ಪಂಡಿತನಾಗಿದ್ದು ಐತರೇಯ ಬ್ರಾಹ್ಮಣ ಮೊದಲಾದುವನ್ನು ಓದಿದ್ದಂತೆ ತೋರುತ್ತದೆ. ಏಕೆಂದರೆ ಇವನ ಹರಿಶ್ಚಂದ್ರಕಾವ್ಯದಲ್ಲಿ ಈಗ ಪ್ರಚಾರದಲ್ಲಿಲ್ಲದ, ಐತರೇಯ ಬ್ರಾಹ್ಮಣದಲ್ಲಿ ವರ್ಣಿತವಾಗಿರುವ ಹರಿಶ್ಚಂದ್ರನ ಕಥೆಯ ಸೂಚನೆಯಿದೆ. ರಾಘವಾಂಕನು ವಿಶ್ವಾಮಿತ್ರಾದಿಗಳ ಪಾತ್ರಗಳನ್ನು ರಚಿಸಿರುವ ರೀತಿಯು ಬಹಳ ಸ್ತೋತ್ರಾರ್ಹವಾಗಿದೆ. ಅವನ 'ಸಂಭಾಷಣೆಯ ಶೈಲಿ' ಯು ಓದುಗರನ್ನು ಬೆರಗು ಮಾಡುತ್ತದೆ.

ಒಟ್ಟಿನಲ್ಲಿ ರಾಘವಾಂಕನು ತಾನೇ ಹೇಳಿಕೊಂಡಿರುವಂತೆ 'ಉಭಯಕವಿ ಕಮಲರವಿ.' ಇವನು ಪಂಪ ಕುಮಾರ ವ್ಯಾಸರೊಡನೆ ಸರಿತೂಗದಿದ್ದರೂ ದೊಡ್ಡ ಕವಿಯೆಂಬುದರಲ್ಲಿ ಸಂದೇಹವಿಲ್ಲ.

ಇವನಿಂದ ಷಟ್ಪದಿ ಬಳಕೆಗೆ ಬಂದಮೇಲೆ ಚಾಮರಸ, ಭೀಮಕವಿ, ವಿರೂಪಾಕ್ಷಪಂಡಿತ, ಮೊದಲಾದ ವೀರಶೈವ ಕವಿಗಳು ಷಟ್ಪದಿಯಲ್ಲಿ ಶಿವಶರಣರ ಚರಿತ್ರೆಗಳನ್ನು ಬರೆದರು. ಷಟ್ಪದಿ ಅಚ್ಚಕನ್ನಡಛಂದಸ್ಸು; ಕನ್ನಡದ ಸ್ವಾವಲಂಬನವನ್ನು ಎತ್ತಿ ತೋರಿಸಲು ನಿದರ್ಶನ. ಚಾಮರಸನ 'ಪ್ರಭುಲಿಂಗ ಲೀಲೆ,' ಭೀಮಕವಿಯ 'ಬಸವಪುರಾಣ,' ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ'—ಇವು ಕನ್ನಡಿಗರಲ್ಲಿ ಪ್ರಸಿದ್ಧ ವಾಗಿವೆ.

ಇತರ ಮತಗಳ ಕವಿಗಳೂ ಈ ಷಟ್ಪದಿಯನ್ನು ಉಪ ಯೋಗಿಸದೆ ಬಿಡಲಿಲ್ಲ. ಈ ಸ್ವಾತಂತ್ರ್ಯಯುಗದಲ್ಲಿಯೇ ಕನ್ನಡ ಕವಿಗಳಲ್ಲಿ ಅತ್ಯಂತ ಸ್ವತಂತ್ರನಾದ ಕುಮಾರವ್ಯಾಸನು ಹುಟ್ಟಿ ತನ್ನ ಅಮೂಲ್ಯ ಕನ್ನಡಭಾರತವನ್ನು ಬರೆದನು. ಈತನ ಹೆಸರು, ಊರು, ಮತ, ಕಾಲ, ಮುಂತಾದ ಎಲ್ಲ ವಿಷಯಗ ಳಲ್ಲಿಯೂ ಪಂಡಿತ ಜನರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಈತನು ಸ್ಮಾರ್ತ ಬ್ರಾಹ್ಮಣನೆನ್ನುವರು. ಮತ್ತೆ ಕೆಲವರು ಈತನು ಭಾಗವತ ಸಂಪ್ರದಾಯದವನೆನ್ನುವರು. ಚಾಮರಸನ ಭಾವಮೈದುನನೆಂದೂ ಕೆಲವರ ವಾದ. ಸುಮಾರು ೧೪೩೦ ರಲ್ಲಿದ್ದನೆಂದು ನಂಬಬಹುದು. ಈತನ ಹೆಸರು ನಾರಣಪ್ಪನೋ, ಕುಮಾರವ್ಯಾಸನೋ, ಕೊನೆಗೆ ಶುಕರೂಪನೋ, ತಿಳಿಯದು. ಇದೆಲ್ಲ ಹೇಗೇ ಇರಲಿ, ಈತ ಶುದ್ಧ ಕನ್ನಡ ಕವಿ, ಉದ್ದಾಮ

ಕವಿ; ಗದುಗಿನ ವೀರನಾರಾಯಣ ಸ್ವಾಮಿಯ ಅಂಕಿತದಲ್ಲಿ ಕಾವ್ಯಬರೆದವನು. ಈತನ ಕಾವ್ಯವು ಇಂದು ಲೋಕಪ್ರಿಯವಾಗಿದೆ. ಕನ್ನಡ ದೇಶದಲ್ಲಿ ಗದುಗುಭಾರತವನ್ನು ಓದದ ಹಳ್ಳಿಯಿಲ್ಲ; ಓದಿ ತಲೆದೂಗದ ಕನ್ನಡಿಗನಿಲ್ಲ.

ಗ್ರಂಥಾರಂಭದಲ್ಲಿ ನಾರಣಪ್ಪನು ತನ್ನ ಪ್ರಾಶಸ್ತ್ಯವನ್ನು ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ.

ಹಲಗೆಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದ
ಉಲುಹುಕೆಡದಗ್ಗಳಿಕೆಯೆಂಬೀ
ಬಲುಹು ಗದುಗಿನವೀರನಾರಾಯಣನ ಕಿಂಕರಗೆ ||

ತಾನು ಹಲಗೆ ಬಳಪ ಹಿಡಿದು ಬರೆದು, ಅಳಿಸಿ, ಪ್ರಯಾಸದಿಂದ ಕವಿತ್ವ ರಚನೆಮಾಡದೆ ಒಂದೇಸಲ ಕಾವ್ಯವನ್ನು ರಚಿಸುವವನೆಂದು ಅವನ ಹೇಳಿಕೆ. ಇದು ಕುಮಾರವ್ಯಾಸನಿಗೆ ಸಲ್ಲತಕ್ಕ ಅಗ್ಗಳಿಕೆಯೇ ಹೊರತು ಜಂಬದ ಮಾತಲ್ಲ. ಆತನ ಕಥಾ ಸಂವಿಧಾನ, ಶೈಲಿ, ಪಾತ್ರರಚನೆ, ರೂಪಕಾದಿ ಅಲಂಕಾರಗಳು—ಎಲ್ಲವೂ ಆತನನ್ನು ಕನ್ನಡಕವಿಗಳಲ್ಲಿ ಅಗ್ರಗಣ್ಯನನ್ನಾಗಿ ಮಾಡಿವೆ. ಪಂಪನು ದೊಡ್ಡವನೇ, ಕುಮಾರವ್ಯಾಸನು ದೊಡ್ಡವನೇ ಎಂಬುದು ಹರಿಯದ ಪ್ರಶ್ನೆ. ಕಥಾಸಂವಿಧಾನದಲ್ಲಿ ಪಂಪನು ಮೇಲ್ಮೈ; ಸನ್ನಿವೇಶವಿಸ್ತಾರದಲ್ಲಿ ಕುಮಾರವ್ಯಾಸ. ಪಾತ್ರಪೋಷಣೆ ಪಂಪನ ಹಿರಿಯ ಗುಣ; ನೂತನ ಭಾವಭಾವನೆಗಳ ತವರ್ಮನೆ ನಾರಣಪ್ಪ. ಪ್ರತಿಭೆ, ಭಾಷೆ, ಕಲ್ಪನಾಶಕ್ತಿ, ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಕುಮಾರವ್ಯಾಸನು

ಬಹಳ ದೊಡ್ಡ ಕವಿ. ಆತನು ಮಹಾಭಾರತವನ್ನು ಹಾಡಿದಾಗ ನಿಜವಾಗಿಯೂ "ಕಲಿಯುಗ ದ್ವಾಪರವಾಗುವುದು; ಭಾರತ ಕಣ್ಣಾಲಿ ಕುಣಿಯುವುದು." ನಾರಣಪ್ಪನು ಭಾರತದ ಮೊದಲ ಹತ್ತು ಪರ್ವಗಳನ್ನು ಮಾತ್ರ ಬರೆದು ಸ್ವರ್ಗಸ್ಥನಾದನು. ಮಿಕ್ಕ ಎಂಟುಪರ್ವಗಳನ್ನು ತಿಮ್ಮಣ್ಣಕವಿಯು ವಿಜಯನಗರದ ಕೃಷ್ಣರಾಯನ ಆಶ್ರಯದಲ್ಲಿದ್ದು ಬರೆದು ಮುಗಿಸಿದನು.

ಇದಾದ ಮೇಲೆ ಬ್ರಾಹ್ಮಣಧರ್ಮಕ್ಕೆ ಸಂಬಂಧಪಟ್ಟ ಹಲವು ಸಂಸ್ಕೃತಗ್ರಂಥಗಳು ಕನ್ನಡಕ್ಕೆ ಪರಿವರ್ತಿತವಾದುವು. ನಿತ್ಯಾತಶುಕಯೋಗಿಯು ಭಾಗವತವನ್ನು ಕನ್ನಡದಲ್ಲಿ ಬರೆದನು, ಕುಮಾರ ವಾಲ್ಮೀಕಿಯು ತನ್ನ 'ತೊರವೆಯ ರಾಮಾಯಣ' ವನ್ನು ಷಟ್ಪದೀಕಾವ್ಯವಾಗಿ ಬರೆದನು. 'ಕರ್ಣಾಟಕವಿ ಚೂತ ವನಚೈತ್ರ'ನೆಂದು ಹೆಸರಾಗಿರುವ ಲಕ್ಷ್ಮೀಶನು 'ಜೈಮಿನಿ ಭಾರತ'ವನ್ನು ವಾರ್ಧಕಷಟ್ಪದಿಯಲ್ಲಿ ಬರೆದನು. ಜೈಮಿನಿ ಭಾರ ತವು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಇದು ಪಂಡಿತ ಪಾಮರರೆಲ್ಲರ ಆದರಕ್ಕೂ ಪಾತ್ರವಾಗಿದೆ. ಇದರಲ್ಲಿ ಬರುವ ಸೀತಾವನವಾಸ, ಚಂದ್ರಹಾಸನ ಚರಿತ್ರೆ ಮುಂತಾದ ಕಥೆಗಳು ಬಹಳ ಉತ್ತಮರೀತಿಯಲ್ಲಿ ನಿರೂಪಿತವಾಗಿವೆ. ಸೀತೆಯು ಅರಿಯದೆ ಕಾಡಿಗೆ ಹೋಗಿ ಅಲ್ಲಿ ಲಕ್ಷ್ಮಣನ ಬಾಯಿಂದ ತನ್ನ ಪತಿಯಾಜ್ಞೆಯನ್ನು ಕೇಳಿದಾಗ ಅವಳು ಆಡುವ ಮಾತು ಎಂಥ ಕಲ್ಲೆದೆಯನ್ನಾದರೂ ಕರಗಿಸುತ್ತದೆ:

**ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ**
**ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ**
**ಗೀಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು**
**ಲೋಕದರಸೇಗೆಯ್ದೊಡಂ ತನ್ನ ಕಿಂಕರರ್**

ಬೇಕು ಬೇಡೆಂದು ಪೇಳರೆ ಭರತಶತ್ರುಘ್ನ
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ||

ಕಲ್ಮುಳ್ಳಿಡಿದ ಕಾಡೊಳಂದೆನ್ನನುಪಚರಿಸಿ
ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ
ಬಲ್ಮೆಯಿಂ ನಾಂ ಕಳುಹಿದೊಡೆ ಜನಸ್ಥಾನದಿಂ ಹೋದೆ ರಾಘವನ ಬಳಿಗೆ
ನಲ್ಮೆಯಂ ಮರೆದಪನೆ ಸೌಮಿತ್ರಿ ನೀನೆಲ್ಲ
ರೊಲ್ಮೆಯುದುನನೆ ತನಗೆ ಕಾನನದೊಳೆನ್ನ ಸಿಲಿ
ಸಲ್ಮನಂ ಬಂದಪುದೆ ತಂದೆ ನಿನಗೆಂದು ಕಂಬನಿಮಿಡಿದಳಂಬುಜಾಕ್ಷಿ ||

ಹೀಗೆ ಮನಕರಗುವ ದೃಶ್ಯಗಳನ್ನು ವರ್ಣಿಸುವುದರಲ್ಲಿ ಮಾತ್ರವೇ ಅಲ್ಲದೆ, ಲಕ್ಷ್ಮೀಶನು ಚಮತ್ಕಾರವಾಗಿ ಶ್ಲೇಷೆಯನ್ನು ತರುವುದರಲ್ಲಿಯೂ ಕಿವಿಗೆ ಇಂಪಾಗುವಂತೆ ಪದಗಳನ್ನು ಜೋಡಿಸುವುದರಲ್ಲಿಯೂ ನಿಪುಣನು. 'ಲಕ್ಷ್ಮೀಶನಿಂಚರ ದಿಂಪು' ಪ್ರಸಿದ್ಧವಾದ ಸಂಗತಿ.

ಸುಮಾರು ಕ್ರಿ. ಶ. ೧೫೫೭ರ ಸಮಯದಲ್ಲಿ ಗ್ರಂಥರಚನೆ ಮಾಡುತ್ತಿದ್ದ ರತ್ನಾಕರ ವರ್ಣಿಯನ್ನು ಕುರಿತು ಇಲ್ಲಿ ಪ್ರಸ್ತಾಪಿಸ ಬಹುದು. ಈತನು ಈಗಿನ ಮೂಡಬಿದರೆಯಲ್ಲಿದ್ದನೆಂದು ತಿಳಿದುಬಂದಿದೆ. ಈತನ ಗ್ರಂಥಗಳಲ್ಲಿ ಭರತೇಶವೈಭವವು ಬಹಳ ಮುಖ್ಯವಾದದ್ದು. ಇದು ೮೦ ಸಂಧಿಗಳಿಂದ ಕೂಡಿರುವ ದೊಡ್ಡ ಸಾಂಗತ್ಯಗ್ರಂಥ. ಬಹುಶಃ ಸಾಂಗತ್ಯದಲ್ಲಿ ಇಷ್ಟು ವಿಸ್ತಾರವಾದ ಗ್ರಂಥವು ಇನ್ನೊಂದಿರಲಾರದು. ಇದರಲ್ಲಿ ಪ್ರಥಮ ತೀರ್ಥಂಕರನಾದ ಪುರುಪರಮೇಶ್ವರನ ಹಿರಿಯ ಕುಮಾರ ಭರತನು "ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾರಿಣಿ ಮೆಚ್ಚೆ ಜಿನಯೋಗಿಯಾಗಿ ಕ್ಷಣಕೆ ಕರ್ಮವ ಸುಟ್ಟು ಜಿನನಾದ" ವೈಭವವು ಹೇಳಿದೆ.

ಈ ವಿಸ್ತಾರವಾದ ಕಾವ್ಯದಲ್ಲಿ ಚಿತ್ರವಿಚಿತ್ರವಾದ ಕಥಾ ಸರಣಿಯಿದೆ, ಹೊಸಹೊಸ ಬಗೆಯ ವರ್ಣನೆಯಿದೆ, ನವರಸ ಪುಷ್ಟಿಯಿದೆ; ತತ್ವಜ್ಞಾನವಿದೆ. ಕವಿಯ ಸರಳವಾದ ಶೈಲಿಯು ಓದುಗರಿಗೆ ಮೆಚ್ಚುಗೆಯನ್ನುಂಟುಮಾಡುವುದು. ಎಷ್ಟು ದೊಡ್ಡ ವಿಷಯವನ್ನಾದರೂ ಕೆಲವೇ ಪದಗಳಲ್ಲಿ ಅಡಕವಾಗಿ ಹೇಳುವ ಶಕ್ತಿಯು ರತ್ನಾಕರವರ್ಣಿಯಲ್ಲಿ ಅಪಾರವಾಗಿದೆ. ಈ ಕವಿಯ ಅನೇಕ ವಾಕ್ಯಗಳು ಗಾದೆಗಳಂತೆ ಬಹಳ ಅರ್ಥಗರ್ಭಿತವಾಗಿವೆ. ಅವುಗಳನ್ನು ಒಂದುಸಲ ಕೇಳಿದರೂ ಸಾಕು, ಮನಸ್ಸಿನಲ್ಲಿ ನಿಂತುಬಿಡುವುವು. ಮಾದರಿಗಾಗಿ ಇಲ್ಲಿ ಕೆಲವನ್ನು ಬರೆದಿದೆ :

'ಗೂಳಿನಡೆವ ಹಜ್ಜೆ ತೋರುವುದಲ್ಲದೆ ಗಾಳಿಯ ಹಜ್ಜೆ ತೋರುವುದೆ ?'
'ಕೊಡುವ ಕೈ ಮೇಲು ಕೊಂಬುವ ಕೈ ಕೆಳಗೆ'
'ಮುರಿದ ಚಿತ್ತವನಿನ್ನು ಮೊನೆಮಾಡಲಹುದೆ ?'
'ಊರ ನೋಡುವೆನೆಂದು ಹೊರಗೇರಿಗೈತಂದು ಊರೆಂತುಟಹುದೋ
ಎಂಬಂತೆ'

ಬಹಳ ಸುಲಭವಾದ ಶೈಲಿಯಲ್ಲಿ ಬರೆದಿರುವುದರಿಂದ ಸಾಮಾನ್ಯರೂ ಇದನ್ನು ಓದಿ ಆನಂದಿಸಬಹುದು. ಆದ್ದರಿಂದಲೇ ಕವಿಯು :

"ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗ
ರಯ್ಯಾ ಮಂಚಿದಿಯೆನೆ ತೆಲುಗ
ರಯ್ಯಯ್ಯ ಯೆಂಚಪೊರ್ಲಾಂಡೆಂದು ತುಳುವರು
ಮೈಯ್ಯುಬ್ಬಿ ಕೇಳಬೇಕಣ್ಣ"

ಎಂದು ಹೇಳಿದ್ದಾನೆ.

ಸುಮಾರು ಹದಿನಾರನೆಯ ಶತಮಾನದ ಆರಂಭದಿಂದ ಕನ್ನಡದಲ್ಲಿ ಹಲವರು ವೈಷ್ಣವದಾಸರು ಹಾಡುಗಳನ್ನು ರಚಿಸ

ತೊಡಗಿದರು. ವೀರಶೈವ ವಚನಸಾಹಿತ್ಯದಂತೆ ಈ ಹಾಡುಗಳೂ ಭಕ್ತಿಪಂಥದ ತತ್ವ ನೀತಿಗಳ ಪ್ರಚಾರಕ್ಕಾಗಿ ಹುಟ್ಟಿದುವು. ವೀರಶೈವ ವಚನಕಾರರು ಶಿವಪಾರಮ್ಯವನ್ನು ಹೇಳಿದರೆ ಈ ದಾಸರು ವಿಷ್ಣುಪಾರಮ್ಯವನ್ನು ಹೇಳಿದ್ದಾರೆ. ಅವರದು ವಚನ, ಇವರದು ಹಾಡು, ಇಷ್ಟೇ ವ್ಯತ್ಯಾಸ. ದಾಸರ ಈ ಹಾಡುಗಳಿಗೆ ದೇವರ ನಾಮುಗಳೆಂದೇ ಹೆಸರು. ಪುರಂದರ ದಾಸ, ವಿಜಯ ದಾಸ, ಕನಕದಾಸ ಮುಂತಾದವರು ಇವರಲ್ಲಿ ಮುಖ್ಯರು.

ವೈಷ್ಣವ ದಾಸರು ವಿಷ್ಣುವೇ ಪರದೇವತೆ ಎಂಬ ಅಭಿಪ್ರಾಯವನ್ನು ಕೆಲವು ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ.

> ಹರಿಪಾದವಿರಲಿಕ್ಕೆ ಪರದೈವಂಗಳಿಗೆರಗಲೇಕೆ?
> ವರಮಾಣಿಕವಿದ್ದು ಎರವಿನ ಒಡವೆಯ ಬಯಸಲೇಕೆ?

ದೇವರ ಅಪಾರವಾದ ಕರುಣೆ ಮಹಿಮೆಗಳನ್ನು ಎಷ್ಟು ಹೊಗಳಿದರೂ ದಾಸರಿಗೆ ತೃಪ್ತಿಯಿಲ್ಲ:

> ಆರು ಬಲ್ಲರು ಹರಿಹರಾದಿಗಳ ಮಹಿಮೆಯನು
> ವಾರಿಜೋದ್ಭವ ಸುರೇಂದ್ರಾದಿಗಳಿಗಳವಲ್ಲ.

ಭಗವಂತನನ್ನು ಭಜಿಸಿ ಜನ ಬದುಕಬೇಕು. ಅವನು ಭಕ್ತವತ್ಸಲನು, ಎಂಬುದು ಹಲವು ಕೀರ್ತನೆಗಳ ಸಾರ:

> ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
> ನಂಬದೆ ಕೆಟ್ಟರೆ ಕೆಡಲಿ.

ಭಗವಂತನು ಭಕ್ತಪರಾಧೀನನು; ಭಕ್ತರ ಮನೆಯಲ್ಲಿ ಆಳು ಕೆಲಸ ಮಾಡುವನು ಎಂದು ದಾಸರು ಸಾರಿದ್ದಾರೆ:

> ಪುಷ್ಪ ತರುವರ ಮನೆಗೆ ಹುಲ್ಲ ತರುವ
> ಅಪ್ಪ ಲಕುಮಿರಮಣ ಇವಗಿಲ್ಲ ಗರುವ

ಭಗವಂತನಿಗೇ ಗರ್ವವಿಲ್ಲದಿರುವಾಗ ಭಕ್ತರು ಕೊಂಚ ಸಿರಿವಂತ ರಾದಮಾತ್ರಕ್ಕೇ ಗರ್ವಪಡಬಹುದೆ! ಸರ್ವಥಾ ಬಾರದು:

ಉಬ್ಬದಿರು ಉಬ್ಬದಿರು ಎಲೆ ಮಾನವ
ಹೆಬ್ಬುಲಿಯಂತೆ ಯಮ ಬೊಬ್ಬಿಡುತ ಕಾದಿರುವ ॥

ಅಹಂಕಾರವನ್ನು ನಾಶಮಾಡಿಕೊಂಡು ವಿನೀತರಾಗಿ ಭಗವಂತ ನನ್ನು ಒಂದೇಮನಸ್ಸಿನಿಂದ ಧ್ಯಾನಮಾಡಿದರೆ:

ಒಂದೇ ಕೂಗಳತೆ ವೈಕುಂಠ
ಸಂದೇಹವಿಲ್ಲವೊ ಸಾಧುಸಜ್ಜನರಿಗೆ ॥

ನಂಬಿ ಭಜಿಸಿದವರಿಗೆ ದೇವರು ತಪ್ಪದೆ ಒಲಿಯುವನು ಎಂಬುದು ಎಲ್ಲ ಭಕ್ತಿಪಂಥಗಳ ತತ್ತ್ವ. "ನಂಬಿ ಕರೆದರೆ ಓ ಎನ್ನನೆ ಶಿವನು" ಎಂಬ ಬಸವಣ್ಣನ ವಚನವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ನಂಬಿ ಭಜಿಸುವ ಭಕ್ತನಿಗೆ ಇಲ್ಲೇ ವೈಕುಂಠವು ಲಭಿಸುತ್ತದೆ. ವೈಕುಂಠವೆಂದು ಬೇರೆಲ್ಲಿಗೂ ಹೋಗಬೇಕಾಗಿಲ್ಲವೆಂದು ಇನ್ನೊಂದು ಕೀರ್ತನೆ ಹೇಳುತ್ತದೆ. ಇಂಥಾ ದೃಢಭಕ್ತಿಯು ಸುಮ್ಮನೆ ಲಭಿಸುವುದಿಲ್ಲ. ಅದಕ್ಕೆ ಸಾಧನೆಮಾಡಬೇಕು; ಶುದ್ಧ ಚರಿತ್ರರಾಗಬೇಕು.

ಮನವ ಶೋಧಿಸಬೇಕು ನಿಚ್ಚ, ದಿನ
ದಿನಮಾಡುವ ಪಾಪಪುಣ್ಯದ ವೆಚ್ಚ

ಶತ್ರುಗಳನ್ನೂ ಮಿತ್ರರಂತೆ ನೋಡುವ ವಿಶ್ವಪ್ರೇಮವನ್ನು ಅಭ್ಯಾಸಮಾಡಬೇಕು. ಧರ್ಮವೇ ಗೆಲ್ಲುವುದೆಂದು ದೃಢವಾಗಿ ನಂಬಿ ಧರ್ಮಾಚರಣೆಯಲ್ಲಿ ತೊಡಗಬೇಕು:

ವಿಷಯದ ವಿಚಾರಬಿಡು, ವಿಹಿತಕರ್ಮವ ಮಾಡು
ವೈರಾಗ್ಯಭಾಗ್ಯವ ಬೇಡು ॥

ವೈರಾಗ್ಯವನ್ನು ಉಪದೇಶಿಸಿದ್ದರಿಂದ ದಾಸರು ಇಹ ಲೋಕನಿರಸನವನ್ನು ಮಾಡಿ ಜನಗಳಿಗೆ ನಿರುತ್ಸಾಹವನ್ನುಂಟು ಮಾಡಿದರೆಂಬ ಒಂದು ಅಪಕೀರ್ತಿ ವೈಷ್ಣವದಾಸರಿಗೆ ಬಂದಿದೆ. ಆದರೆ ಇದು ಸರಿಯಲ್ಲ. ದಾಸರು ಇಹ ಜೀವನವನ್ನು ತಿರಸ್ಕರಿಸಲಿಲ್ಲ. ಇಹಲೋಕ ಸುಖವೇ ಪರಮಾರ್ಥವೆಂದು ನೆಚ್ಚಿ ಕೆಡಬಾರದೆಂಬುದಿಷ್ಟೇ ಅವರ ಉದ್ದೇಶ. ಸಂಸಾರವನ್ನು ಕುರಿತು ದಾಸರು ಹೇಳಿರುವುದನ್ನು ಕೇಳಿ :

ಸಂಸಾರವೆಂಬಂಥ ಭಾಗ್ಯವಿರಲಿ
ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ.

ಅಷ್ಟೇ ಅಲ್ಲದೆ ಸಂಸಾರದ ಕಷ್ಟ ಕಾರ್ಪಣ್ಯಗಳಿಗೆ ಹೆದರಿ ಸಂನ್ಯಾಸಿಯಾಗಲೆಳಸುವುದು ಹೆಡ್ಡತನವೆಂಬುದು ‘ ಈಸಬೇಕು ಇದ್ದು ಜೈಸಬೇಕು ’ ಎಂಬ ಕೀರ್ತನೆಯಲ್ಲಿ ನಿರೂಪಿತವಾಗಿದೆ.

ದಾಸರು ದೇವರ ಮಹಿಮೆ, ಕರುಣೆ, ಮೋಕ್ಷಸಾಧನೆಯ ಮಾರ್ಗ ಮುಂತಾದ ಆಧ್ಯಾತ್ಮಿಕ ವಿಷಯಗಳನ್ನೇ ಅಲ್ಲದೆ ಆಗಾಗ ಲೌಕಿಕ ನೀತಿಯನ್ನೂ ಉಪದೇಶಿಸಿದ್ದಾರೆ. ತ್ರಿಕರಣ ಶುದ್ಧಿಯಿಂದ ಸದಾಚಾರಿಗಳಾಗಿರಬೇಕೇ ಹೊರತು ಬಾಹ್ಯಾ ಡಂಬರದಿಂದ ಲಾಭವಿಲ್ಲ ಎಂಬ ಅಭಿಪ್ರಾಯವು ಕೆಲವು ಕೀರ್ತನೆಗಳಲ್ಲಿ ವ್ಯಕ್ತವಾಗಿದೆ.

ಯಾಕೆ ಈ ದೇಹವನು ದಂಡಿಸುವೆ ವ್ಯರ್ಥ
ಏಕಚಿತ್ತದಲಿ ಲಕ್ಷ್ಮೀಪತಿ ಎನ್ನದೆ
ಕುಹಿತತನವನು ಬಿಡದೆ ನಿರಂತರ
ಉಪವಾಸಮಾಡಿದರೇನು ಫಲ?

ದುಷ್ಟರಿಗೆ ಉಪಕಾರ ಮಾಡಿದ್ದರಿಂದ ಅವರು ಸಜ್ಜನರಾಗು ವುದಿಲ್ಲ ; ಅವರ ನಡತೆ ಮಾರ್ಪಡುವುದಿಲ್ಲ ಎಂಬಅಭಿಪ್ರಾಯ :

"ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ?

ಎಂಬ ಕೀರ್ತನೆಯಲ್ಲಿ ನಿರೂಪಿತವಾಗಿದೆ.

ವೈಷ್ಣವದಾಸರು ತಮ್ಮ ಜೀವಿತಗಳನ್ನು ಜನರಲ್ಲಿ ಧರ್ಮಪರತೆಯನ್ನೂ ದೈವಭಕ್ತಿಯನ್ನೂ ಬೆಳೆಸುವುದರಲ್ಲಿಯೇ ಕಳೆದರು. ಇವರ ಕೀರ್ತನೆಗಳು ನಮ್ಮ ಜನದಲ್ಲಿ ಮೊದಲಿನಿಂದ ಪ್ರಚಾರದಲ್ಲಿರುವ ಪುರಾಣೇತಿಹಾಸಗಳಿಂದ ಆರಿಸಿಕೊಂಡ ದೃಷ್ಟಾಂತಗಳಿಂದ ತುಂಬಿವೆ. ಇವುಗಳ ಭಾಷೆ ಬಹಳ ಸುಲಭವಾದದ್ದು. ಅನೇಕವೇಳೆ ದಾಸರ ಕೀರ್ತನೆಗಳು ದಿನಚರಿಯ ಜೀವನಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಭಗವಂತನ ಪ್ರಭಾವವನ್ನು ನಿರೂಪಿಸಿ ಬರೆದಂಥವು. ಇದರಿಂದ ದಾಸರ ಕೀರ್ತನೆಗಳು ಕನ್ನಡದೇಶದಲ್ಲೆಲ್ಲ ಪ್ರಚಾರದಲ್ಲಿವೆ: ಕೀರ್ತನೆಗಳ ಹಲವು ವಾಕ್ಯಗಳು ಗಾದೆಗಳಂತೆ ಪ್ರಯೋಗದಲ್ಲಿವೆ. "ಕತ್ತೆ ಬಲ್ಲುದೆ ಹೊತ್ತ ಕಸ್ತುರಿಯ ಪರಿಮಳವ" "ಕೊಟ್ಟದೇವರು ಕಿತ್ತುಕೊಂಡರೆ ಕುಟ್ಟಿಕೊಂಡು ಅಳುವುದ್ಯಾಕೆ." ಅನೇಕ ವೇಳೆ ಈ ಮಾತುಗಳು ಎಲ್ಲಿಯವೆಂಬುದನ್ನು ತಿಳಿಯದೆಯೇ ಜನಗಳು ಆಡುವರು. ಹಾಡುವುದಕ್ಕೆ ಯೋಗ್ಯವಾದ ಛಂದೋಬದ್ಧವಾದ ಭಾಷೆ, ಸುಂದರವಾದ ಉಪಮಾನಗಳು, ಜೀವನವಿಮರ್ಶೆ ಮುಂತಾದುವು ಈ ಹಾಡುಗಳಿಗೆ ಕಾವ್ಯತ್ವವನ್ನುಂಟುಮಾಡಿವೆ.

ಒಟ್ಟಿನಲ್ಲಿ ವೈಷ್ಣವದಾಸ ಸಾಹಿತ್ಯವು ವೀರಶೈವರ ವಚನ ಸಾಹಿತ್ಯದಂತೆಯೇ ಜನರಿಗೆ ದೈವಭಕ್ತಿ ನೀತಿಪರತೆಗಳನ್ನು ಉಪದೇಶಿಸುವುದಕ್ಕೋಸ್ಕರ ಹೊರಟಿದೆ. ಇವುಗಳಿಂದ ಕೇವಲ ಮತಪ್ರಚಾರವೇ ಅಲ್ಲದೆ ಕನ್ನಡ ಕಾವ್ಯಾಭಿವೃದ್ಧಿಯೂ ಆಯಿತು.

# ಚಿಕ್ಕದೇವರಾಯರ ಕಾಲ

ವಿಜಯನಗರ ಸಾಮ್ರಾಜ್ಯವು ನಾಶವಾದಮೇಲೆ ಸಣ್ಣಪುಟ್ಟ ಪಾಳೆಯಗಾರರು ಹೆಚ್ಚಿದುದರಿಂದಲೂ ರಾಜ್ಯದಲ್ಲಿ ಉಂಟಾದ ಕ್ಷೋಭೆಯಿಂದಲೂ ದೇಶದಲ್ಲಿ ಅಶಾಂತಿ ನೆಲಸಿತು. ಸಾಹಿತ್ಯ ದಲ್ಲಿ ಹೆಚ್ಚು ಕೆಲಸ ನಡೆಯಲು ಸಾಧ್ಯವಾಗಲಿಲ್ಲ. ಹೀಗೆ ಹೀನ ಸ್ಥಿತಿಯಲ್ಲಿದ್ದ ಕನ್ನಡ ಸಾಹಿತ್ಯವು ಪುನಃ ತಲೆಯೆತ್ತಿದುದು ಮೈಸೂರರಸರ ಕಾಲದಲ್ಲಿಯೇ; ಶ್ರೀವೈಷ್ಣವಮತದ ಪ್ರಾಬ ಲ್ಯವೂ ಇದಕ್ಕೆ ಪ್ರೇರಕವಾಯಿತು.

ಚಿಕ್ಕದೇವರಾಯರು ಸ್ವಯಂಕವಿಗಳು; ಕವಿಪೋಷಕರು. ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ ಎಂಬ ಕವಿಗಳೂ ಹೊನ್ನಮ್ಮನೆಂಬ ಕಬ್ಬಿಗಿತಿಯೂ ಈತನ ಆಶ್ರಿತರಾಗಿ ದ್ದರು. ತಾವೇ ಸ್ವಂತವಾಗಿ 'ಗೀತಗೋಪಾಲ,' 'ಚಿಕ್ಕದೇವ ರಾಜ ಬಿನ್ನಪಂ' ಎಂಬ ಎರಡು ಗ್ರಂಥಗಳನ್ನು ಬರೆದಿ ದ್ದಾರೆ. 'ಗೀತಗೋಪಾಲ'ವು ಜಯದೇವನ 'ಗೀತಗೋವಿಂದ' ವೆಂಬ ಸಂಸ್ಕೃತಗ್ರಂಥದ ಮಾದರಿಯನ್ನು ಅನುಸರಿಸಿದಂತೆ ತೋರುತ್ತದೆ. "ಮೋಕ್ಷೋಪಾಯಮಂ ಸಾಧಿಸುವುದಕ್ಕೆ ಉಪಾ ಯವಾದ ಪ್ರಪತ್ತಿಸ್ವರೂಪ"ವನ್ನು ಕೀರ್ತನೆಗಳ ಮೂಲಕ ತಿಳಿಸುವುದೇ ಇಲ್ಲಿ ಕವಿಯ ಉದ್ದೇಶ. ಗೋಪಿಕಾವೃತ್ತಾಂತ ವನ್ನು ಹೇಳುವ ನೆಪದಿಂದ ಭಗವಂತನ ಗುಣಗಳನ್ನು ಕವಿಯು ವರ್ಣಿಸಿದ್ದಾನೆ. ಈ ಕೀರ್ತನೆಗಳಲ್ಲಿ ಭಾಗವತವೇ ಮೊದಲಾದ ಪುರಾಣೇತಿಹಾಸಗಳಲ್ಲಿರುವ ಭಾಗವತೋತ್ತಮರ ಅಭಿಪ್ರಾಯ ಗಳೂ 'ಆಳ್ವಾರ್' ಎಂಬ ಭಕ್ತರ ಶ್ರೇಷ್ಠವಾದ ಅಭಿಪ್ರಾಯ ಗಳೂ ಅಡಕವಾಗಿವೆ. ಕವಿಯು ತಾನು ಹೇಳಬೇಕೆಂದಿರುವ

ತತ್ತ್ವವನ್ನು ವಚನದಲ್ಲಿ ಹೇಳಿ ಆಮೇಲೆ ಅದಕ್ಕೆ ಸಂಬಂಧಪಟ್ಟ ಕೀರ್ತನೆಯನ್ನು ಹೇಳುವನು. ಸುಲಭವಾದ ಮಾತುಗಳಲ್ಲಿ ಮಹತ್ತ್ವದ ವಿಷಯಗಳನ್ನು ಕವಿಯು ಸಂಗೀತಕ್ಕೆ ಹೊಂದುವ ಹಾಗೆ ಹೇಳಿರುವುದು ಚಾತುರ್ಯ. ಇದೊಂದು ಉದಾಹರಣೆ:

ತಪ್ಪದಾರದು | ತಿಳಿದು ನೋಡೆ ತಪ್ಪದಾರದು ||
ತಪ್ಪುನೆಪ್ಪುಗಳ ವಿಕಲ್ಪಿಸದೆಲ್ಲವ |
ನೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ ||   (ಪಲ್ಲವಿ)

ಬಾನಿಯು ಬಳಸುವ ಪಸುಳೆಯು ತಪ್ಪೋ
ತಾ ಮಾದು ತಡೆಯದ ತಾಯದು ತಪ್ಪೋ
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ
ಆ ವೇಳೆಗಾವುಗೆಯ್ಯದ ನಿನ್ನ ತಪ್ಪೋ ||

ಓಜೆಗುಂದುವ ವೀಣೆಯುಲುಹಿನ ತಪ್ಪೋ
ಬಾಜಿಸುವನ ಕೈಯ ಪವಣಿನ ತಪ್ಪೋ
ರಾಜ ಶ್ರೀಚಿಕ್ಕದೇವರಾಯನಿಗೊಲಿದ ಶ್ರೀ
ರಾಜಗೋಪಾಲ ನಿರಾಕರಿಸದೆ ಪೇಳು ||

ಚಿಕ್ಕದೇವರಾಜ ಒಡೆಯರ ಮಂತ್ರಿವರ್ಗಕ್ಕೆ ಸೇರಿದ ತಿರುಮಲಾರ್ಯನು 'ಅಪ್ರತಿಮವೀರ ಚರಿತೆ' ಎಂಬ ಅಲಂಕಾರ ಶಾಸ್ತ್ರಗ್ರಂಥವನ್ನೂ 'ಚಿಕ್ಕದೇವರಾಯ ವಂಶಾವಳಿ' ಎಂಬ ಗದ್ಯಕಾವ್ಯವನ್ನೂ ಬರೆದನು. ಚಿಕ್ಕದೇವರಾಯರಿಗೆ ಅಪ್ರತಿಮ ವೀರ ಎಂಬುದೊಂದು ಬಿರುದು. ಚಿಕ್ಕದೇವರಾಯವಂಶಾವಳಿಯಲ್ಲಿ ದೊರೆಯ ಪೂರ್ವಿಕರ ಚರಿತ್ರೆಯೂ ಶ್ರೀವೈಷ್ಣವಧರ್ಮದ ಸ್ವರೂಪವೂ ವರ್ಣಿತವಾಗಿವೆ. ಇದಲ್ಲದೆ ಈತನು 'ಚಿಕ್ಕದೇವರಾಜವಿಜಯಂ' ಎಂಬ ಒಂದು ಚಂಪೂಗ್ರಂಥವನ್ನೂ ಬರೆದಿರುವನು. ಇದರ ಆರು ಆಶ್ವಾಸಗಳು ಮಾತ್ರ ದೊರೆತಿವೆ.

ಇದರಲ್ಲಿ ಮೈಸೂರ ಅರಸರ ಚರಿತ್ರೆಯನ್ನು ಹೇಳಿದೆ. ತಿರುಮಲಾರ್ಯನು ರಾಜನಿಗೆ ಬಹಳ ಆಪ್ತನೆಂದು ತೋರುತ್ತದೆ. "ಅವನೊಲ್ಮೆ ಪುಮಾಕೃತಿವೆತ್ತವೊಲೆಸೆವ ಸುಕೃತಿ ತಿರುಮಲೆಯಾರ್ಯಂ" ಎಂದು ತಾನೇ ಹೇಳಿಕೊಂಡಿದ್ದಾನೆ.

ಚಿಕ್ಕದೇವರಾಜರಲ್ಲಿ ಕರಣಿಕಾಗ್ರೇಸರನೂ ಮಂತ್ರಿಯೂ ಆಗಿದ್ದ ಚಿಕ್ಕುಪಾಧ್ಯಾಯನೆಂಬ ಶ್ರೀವೈಷ್ಣವ ಬ್ರಾಹ್ಮಣನು ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಬಹುಶಃ ಕನ್ನಡದಲ್ಲಿ ಈತನು ಬರೆದಿರುವಷ್ಟು ಗ್ರಂಥಗಳನ್ನು ಇನ್ನು ಯಾವ ಕವಿಯೂ ಬರೆದಿಲ್ಲ. ದಿವ್ಯಸೂರಿಚರಿತ್ರೆ, ರುಕ್ಮಾಂಗದ ಚರಿತ್ರೆ, ವಿಷ್ಣುಪುರಾಣ, ಕಮಲಾಚಲಮಾಹಾತ್ಮ್ಯೆ, ಹಸ್ತಿಗಿರಿ ಮಾಹಾತ್ಮ್ಯೆ ಮೊದಲಾದ ಹಲವು ಚಂಪೂಗ್ರಂಥಗಳನ್ನೂ ಪಶ್ಚಿಮರಂಗಮಾಹಾತ್ಮ್ಯೆ ಮುಂತಾದ ಸಾಂಗತ್ಯಗ್ರಂಥಗಳನ್ನೂ ಶುಕಸಪ್ತತಿ, ಕಾಮಂದಕನೀತಿ ಮೊದಲಾದ ಹಲವು ಗದ್ಯ ಗ್ರಂಥಗಳನ್ನೂ ಈತನು ಬರೆದನು. ವಿಷ್ಣುಪುರಾಣವನ್ನು ಚಂಪೂರೂಪದಲ್ಲಲ್ಲದೆ ಗದ್ಯರೂಪದಲ್ಲಿಯೂ ಬರೆದಿದ್ದಾನೆ. ಶ್ರೀವೈಷ್ಣವಧರ್ಮ ಪ್ರಚಾರ ಈತನಿಗೆ ಕಾವ್ಯರಚನೆಯಲ್ಲಿದ್ದ ಉದ್ದೇಶ. ಈತನ ನಿಜವಾದ ಹೆಸರು ಲಕ್ಷ್ಮೀಪತಿಯೆಂದೂ ತೆರಕಣಾಂಬಿಯು ಈತನ ಜನ್ಮಸ್ಥಳವೆಂದೂ ತಿಳಿದುಬಂದಿದೆ.

ಚಿಕ್ಕುಪಾಧ್ಯಾಯನು ಸರಸಿಯೂ ಹಾಸ್ಯಶೀಲನೂ ಆಗಿದ್ದಂತೆ ತೋರುತ್ತದೆ. ಕನ್ನಡನುಡಿಯ ವೈಲಕ್ಷಣ್ಯವನ್ನು ಕುರಿತು ಆತನು ಹೇಳಿರುವ ಎರಡು ಪದ್ಯಗಳು ಚಮತ್ಕಾರವಾಗಿವೆ :

> ಹುರಿಯೋಡ ಸಿರಿವಾತಿಗೆಯೆಂದೆಂಬುದು
> ನರನ ಹಾರುವನೆಂದೆಂಬುದು

ಮರಗೆತ್ತು ವನಸೋಜನೆಂದೆಂಬುದೇನ
ಚ್ಚರಿ ರಂಗ ಕನ್ನಡದೊಳ್ಪು ||

ಸರಸನನರಸನೆಂಬುದು ಪೂರ್ಣಗೃಹವನು
ಅರಮನೆಯೊಂದುಸಿರುವುದು
ನರಪಕುಮಾರನನರಮಗನೆಂಬುದೇ
ನೊರೆ ರಂಗ ಕನ್ನಡದೊಳ್ಪು ||

ಇದೇ ಕಾಲದಲ್ಲಿಯೇ ಸಿಂಗರಾರ್ಯನೆಂಬ ಕವಿಯು "ಮಿತ್ರ ವಿಂದಾ ಗೋವಿಂದ" ಎಂಬ ಒಂದು ನಾಟಕವನ್ನು ಬರೆದನು. ಶ್ರೀಹರ್ಷನು ಸಂಸ್ಕೃತದಲ್ಲಿ ಬರೆದ 'ರತ್ನಾವಳಿ'ಯ ಮಾದರಿಯನ್ನು ಅನುಸರಿಸಿ, ಶ್ರೀಕೃಷ್ಣನು ಮಿತ್ರವಿಂದೆಯನ್ನು ಮದುವೆಯಾದ ಕಥೆಯನ್ನು ನಾಟಕರೂಪವಾಗಿ ಬರೆದಿದ್ದಾನೆ. ಕನ್ನಡದ ಮೊದಲ ನಾಟಕವೆಂಬ ಕಾರಣದಿಂದ ಇದಕ್ಕೆ ಪ್ರಾಶಸ್ತ್ಯವುಂಟು. ಇದಕ್ಕೆ ಮುಂಚೆ ಕನ್ನಡದಲ್ಲಿ ಯಾವ ಕವಿಯೂ ನಾಟಕರಚನೆಗೆ ಕೈಹಾಕಿದಂತೆ ಕಾಣುವುದಿಲ್ಲ.

ಸಿಂಗರಾರ್ಯನ ಶಿಷ್ಯೆಯಾದ ಹೊನ್ನಮ್ಮನು 'ಹದಿಬದೆಯ ಧರ್ಮ'ವನ್ನು ಸಾಂಗತ್ಯದಲ್ಲಿ ಬರೆದಳು. ಈಕೆಯು ಚಿಕ್ಕದೇವರಾಜನ ಅಂತಃಪುರದಲ್ಲಿ ಸಂಚಿಯ ಉದ್ಯೋಗದಲ್ಲಿದ್ದವಳು. ಈಕೆಯ ಪಾಂಡಿತ್ಯವನ್ನು ಗ್ರಹಿಸಿ ಈಕೆಯಿಂದ ಕಾವ್ಯವನ್ನು ಬರೆಯಿಸಬೇಕೆಂದು ಅರಸನು ಅರಸಿಯೊಡನೆ ಹೇಳಿದನಂತೆ. ಅರಸಿಯ ಆಜ್ಞೆಯಂತೆ ತಾನು ಈ ಗ್ರಂಥವನ್ನು ಬರೆಯತೊಡಗಿದ್ದಾಗಿ ಹೊನ್ನಮ್ಮನು ಹೇಳಿಕೊಂಡಿದ್ದಾಳೆ. ಪತಿವ್ರತೆಯರಾದ ಹೆಂಗಸರು ಹೇಗೆ ನಡೆದುಕೊಳ್ಳಬೇಕೆಂಬುದೇ ಈ ಗ್ರಂಥದ ವಸ್ತು. ಆಕೆಯ ಹಲವು ಅಭಿಪ್ರಾಯಗಳು ಈ ಕಾಲದ ನಮಗೆ ಒಪ್ಪಿಗೆಯಾಗದಿದ್ದರೂ ಆಕೆಯು ಸುಲಲಿತವಾದ ಮಾತಿನಲ್ಲಿ

ಹಲವು ನೀತಿಗಳನ್ನು ಹೇಳಿರುವ ರೀತಿಯು ಮೆಚ್ಚುಗೆಯನ್ನುಂಟು ಮಾಡುತ್ತದೆ.

ಪದಿನೆಂಟು ಬಣ್ಣನೆಯೊಂದು ಬವಣೆಗೊಂಡು
ಪದಗೆಟ್ಟು ಬಯಲ ಬಣ್ಣಿಸವೆ
ಮುದದೊಡನಿಹಪರದೇಳ್ಗೆವಡೆಯೆ
ಹದಿಬದೆಯ ಧರ್ಮವ ಬಣ್ಣಿಪೆನು ||

ಎಂಬುವರಲ್ಲಿ ವಿಡಂಬನವಿದ್ದರೂ ಇರಬಹುದು.

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ||

ಎಂದು ನುಡಿದ ಹೊನ್ನಮ್ಮನು ಹೆಣ್ಣುಜನ್ಮದ ಉತ್ಕೃಷ್ಟ ನ್ಯಾಯವಾದಿ. ಅಲ್ಲದೆ "ಪೆಣ್ಣು ಪೆತ್ತುದರಿಂದೆ ಪೆಸರೆನಿಸಿತು ಮಿಗೆ ಬಣ್ಣವೇರಿತು ಪಾಲ್ಗಡಲು" ಎಂದು ಹೇಳಿರುವುದನ್ನು ನೋಡಿದರೆ ಹೊನ್ನಮ್ಮನ ಕಾಲಕ್ಕೆ ವರದಕ್ಷಿಣೆ ವರೋಪಚಾರಗಳ ಹಾವಳಿ ಹೆಚ್ಚಾಗಿರಲಿಲ್ಲವೆಂದು ತೋರುತ್ತದೆ! ಸದಾ ಜಗಳಕಾಯುತ್ತಿರುವ ಗಂಡಹೆಂಡಿರನ್ನು ಕೋಪದಿಂದ ನುಂಗದೆ ಸಹಿಸಿಕೊಂಡು ಸುಮ್ಮನಿರುವುದರಿಂದ ಭೂಮಿಗೆ "ಸರ್ವಂಸಹೆ" ಎಂದು ಹೆಸರಾಯಿತಂತೆ! ಕಾವ್ಯದ ಕೊನೆಯಲ್ಲಿ ಹೊನ್ನಮ್ಮ "ಕನ್ನಡನಾಡೊಳು ಕಲಿಯುಗ ಪುಗದಿರ್ಕೆ" ಎಂದು ಹರಸಿದ್ದಾಳೆ. ಒಟ್ಟಿನಲ್ಲಿ ಹೊನ್ನಮ್ಮನ 'ಹದಿಬದೆಯ ಧರ್ಮ'ವು ಒಂದು ಚೆಲುವಾದ ತಿಳಿಗನ್ನಡದ ಲಲಿತಗ್ರಂಥ, ಸರ್ವಜನಗ್ರಾಹ್ಯವಾದುದು.

ಕ್ರಿ. ಶ. ಸುಮಾರು ೧೬೫೫ ರ ವೇಳೆಗೆ ಪ್ರಸಿದ್ಧನಾಗಿದ್ದ ಷಡಕ್ಷರದೇವನು ರಾಜಶೇಖರ ವಿಲಾಸ, ವೃಷಭೇಂದ್ರ ವಿಜಯ, ಮತ್ತು ಶಬರಶಂಕರವಿಲಾಸ ಎಂಬ ಮೂರು ಗ್ರಂಥಗಳನ್ನು ಬರೆದಿದ್ದಾನೆ. ವೀರಭದ್ರದಂಡಕವೆಂಬ ಇನ್ನೊಂದು ಗ್ರಂಥವನ್ನೂ ಬರೆದಿರುವನೆಂದು ಹೇಳುವರು. ಈತನು ಎಳಂದೂರು ಮಠಕ್ಕೆ ಸ್ವಾಮಿಯಾಗಿದ್ದು ಅಲ್ಲಿಯೇ ಸಮಾಧಿಯನ್ನು ಹೊಂದಿದನು. ಇವನಿಗೆ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಉದ್ದಾಮವಾದ ಪಾಂಡಿತ್ಯವಿತ್ತು. ಇವನ ನಿರರ್ಗಳವಾದ ಶೈಲಿ, ಚಮತ್ಕಾರವಾದ ವರ್ಣನೆ–ಇವು ಪಂಡಿತಜನರ ಮನ್ನಣೆ ಮೆಚ್ಚುಗೆಗಳಿಗೆ ಪಾತ್ರವಾಗಿವೆ.

ಸುಮಾರು ಈ ಕಾಲದಲ್ಲಿಯೇ ವೆಂಕಟಾರ್ಯಶಿಷ್ಯನೆಂಬ ಕವಿಯು "ಶ್ರೀಕೃಷ್ಣಗೋಪೀವಿಲಾಸಂ" ಎಂಬ ಒಂದು ಗ್ರಂಥವನ್ನು ಬರೆದನು. ಈತನ ನಿಜವಾದ ಹೆಸರು ಗೊತ್ತಿಲ್ಲ. ಶುಕಮಹಾಯೋಗೀಂದ್ರರು ಈ ಕಥೆಯನ್ನು ಹರಿಭಕ್ತನಾದ ಪರೀಕ್ಷಿತನಿಗೆ ಸಕಲಾಗಮಾರ್ಥಸಂಗ್ರಹವೆಂದು ಹೇಳಿದರಂತೆ. ಈ ಗ್ರಂಥದ ಪೀಠಿಕೆಯಲ್ಲಿ ಕವಿಯು ಹೇಳಿಕೊಂಡಿರುವ ಒಂದು ಮಾತು ಆ ಕಾಲದಲ್ಲಿ ಮತ್ತೆ ಉಂಟಾಗಿದ್ದ ಸಂಸ್ಕೃತದ ಪ್ರಾಬಲ್ಯವನ್ನು ಸೂಚಿಸುತ್ತದೆ :

**ಗಂಗೆಯು ಗಾಜ ಕುಪ್ಪಿಗೆಯೊಳು ತರಲು ತಾಂ**
**ಗಂಗೆಯುಹುದಲ್ಲದೆ ಜಲವಹುದೆ**
**ರಂಗನ ಕಥೆಯ ಭಾಷಾಂತರದೊಳು ಪೇಳೆ ತಾ**
**ಮಂಗಳಮಹಿಮೆ ತಪ್ಪುವುದೆ ?**

ಎಂದು ಕವಿಯು ಕೇಳಿದ್ದಾನೆ. "ಭಗವಂತನ ಚರಿತ್ರೆಯನ್ನು ಕನ್ನಡದಲ್ಲಿ ಹೇಳಿದರೆ ಅದು ಅಪವಿತ್ರವಾಗುವುದಿಲ್ಲ; ಅದರ ಮಹಿಮೆ ಕುಗ್ಗುವುದಿಲ್ಲ" ಎಂದು ಅವನ ಅಭಿಪ್ರಾಯ.

ಕೆಲವು ಕನ್ನಡ ಕವಿಗಳು ಮತ್ತೆ ಮತ್ತೆ ಹೀಗೆ ತಮ್ಮ ಭಾಷೆಯ ಪ್ರಾಶಸ್ತ್ಯವನ್ನು ಸ್ಥಾಪಿಸಲು ಯತ್ನಿಸಿರುವುದನ್ನು ಭಾವಿಸಿದರೆ ಕನ್ನಡಿಗರಿಗೆ ತಮ್ಮಲ್ಲಿ ತಮಗೇ ನಂಬಿಕೆ ಇರಲಿಲ್ಲ ವೆಂದು ತೋರುತ್ತದೆ. ತಮ್ಮ ಭಾಷೆಯೇನೋ ಸ್ವಲ್ಪ ಕೀಳು ಎಂಬ ಹೆದರಿಕೆ. ಆದ್ದರಿಂದಲೇ ಕವಿಗಳು ಆಗಾಗ ಹೀಗೆ ಮಾತ ನಾಡುವರು. ಸಂಸ್ಕೃತ ಕನ್ನಡಗಳನ್ನು ಬೆರಸಿದರೆ ಎಣ್ಣೆ ತುಪ್ಪ ಗಳನ್ನು ಬೆರಸಿದಂತೆ ಎಂದು ಒಬ್ಬ ಕವಿಯೂ ಮುತ್ತನ್ನೂ ಮಣಿ ಸನ್ನೂ ಪೋಣಿಸಿದಂತೆ ಎಂದು ಇನ್ನೊಬ್ಬ ಕವಿಯೂ ಹೇಳಿ ದ್ದಾರೆ. ಅಲ್ಲದೆ ಕನ್ನಡ ವ್ಯಾಕರಣಗಳನ್ನು ಸಂಸ್ಕೃತದಲ್ಲಿ ಬರೆ ದಿದ್ದಾರೆ. 'ಶಬ್ದಾನುಶಾಸನ'ವೆಂಬ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದ ಭಟ್ಟಾಕಳಂಕನು ಕನ್ನಡವು ಸಂಸ್ಕೃತ ಕ್ಕಿಂತ ಯಾವ ವಿಧದಲ್ಲಿಯೂ ಕಡಮೆಯಿಲ್ಲವೆಂದು ಸ್ಥಾಪಿಸಲು ಬಹಳ ಪ್ರಯಾಸಪಟ್ಟಿದ್ದಾನೆ. ಸುಮಾರು ಇದೇ ಕಾಲದ ಲ್ಲಿಯೇ 'ಅನುಭವಾಮೃತ' ವೆಂಬ ಗ್ರಂಥವನ್ನು ಬರೆದ ರಂಗನಾಥನು

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡಡೆ ಸಾಲದೇ ಸಂಸ್ಕೃತದಲಿನ್ನೇನು ॥

ಎಂದು ಹೇಳಿದ್ದಾನೆ. ಬಹುಶಃ ಸಂಸ್ಕೃತದ ಅಪಾರವಾದ ಘನ ಸಾಹಿತ್ಯವನ್ನು ನೋಡಿ ಕನ್ನಡದಿಂದೇನಾದೀತು ಎಂಬ ಶಂಕೆ ಹಲವರ ಮನಸ್ಸಿನಲ್ಲಿ ಹುಟ್ಟಿರಬೇಕು. ಅಲ್ಲದೆ ಕನ್ನಡ ನಾಡು ಯಾವಾಗಲೂ ಹಲವು ರಾಜವಂಶಗಳಿಗೆ ಸೇರಿ ಹರಿ ಹಂಚಾಗಿ ಒಡೆದುಹೋಗಿದ್ದುದರಿಂದ ಕನ್ನಡದ ಕವಿಗಳಲ್ಲಿ ಆತ್ಮವಿಶ್ವಾಸ ಉತ್ಸಾಹಗಳೂ ಕೊಂಚ ಕಡಮೆಯಾಗಿರಬೇಕು. ಆದ್ದರಿಂದಲೇ ಅಭಿಮಾನಶಾಲಿಗಳಾದ ಮತ್ತು ಕನ್ನಡನುಡಿಯ ಶಕ್ತಿ ಸೌಂದರ್ಯಗಳನ್ನು ತಿಳಿದ ಕೆಲವು ಕವಿಗಳು ಆಗಾಗ ಹೀಗೆ ಎಚ್ಚರಿಸಬೇಕಾಯಿತು.

## ಸಂಧಿಕಾಲ

ಚಿಕ್ಕದೇವರಾಜರ ಅನಂತರ ವಿದ್ವತ್ಪೋಷಕರಾದ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರು ಅನೇಕ ವಿದ್ವಾಂಸರಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯಕೊಟ್ಟರು. 'ಶ್ರೀಕೃಷ್ಣರಾಜ ವಾಣೀವಿಲಾಸಭಾರತ' 'ಶಾಕುಂತಲ ನಾಟಕದ ನವೀನ ಟೀಕೆ' ಮೊದಲಾದ ಹಲವು ಗದ್ಯಗ್ರಂಥಗಳನ್ನು ತಾವೇ ಬರೆದರು. ಇವರ ಆಶ್ರಿತರಲ್ಲೊಬ್ಬನಾದ ಕೆಂಪುನಾರಾಯಣ ಪಂಡಿತನು 'ಮುದ್ರಾಮಂಜೂಷ'ವೆಂಬ ಉತ್ತಮವಾದ ಒಂದು ಗದ್ಯಗ್ರಂಥವನ್ನು ರಚಿಸಿದನು. ವಿಶಾಖದತ್ತನು ಸಂಸ್ಕೃತದಲ್ಲಿ ಬರೆದಿರುವ ಮುದ್ರಾರಾಕ್ಷಸವೆಂಬ ನಾಟಕವು ನಂದರ ವಿನಾಶವಾದ ಮೇಲಿನ ಕಥೆಯನ್ನು ಮಾತ್ರ ತಿಳಿಸುತ್ತದೆ. ಕೆಂಪುನಾರಾಯಣಶರ್ಮನ ಗ್ರಂಥವು ಚಾಣಕ್ಯನು ನಂದರ ವಿನಾಶವನ್ನುಂಟುಮಾಡಿದ ಕಥೆಯನ್ನೂ ಅನಂತರದ ಕಥೆಯನ್ನೂ ಆಮೂಲಾಗ್ರವಾಗಿ ವರ್ಣಿಸುತ್ತದೆ. ಈತನು ಲಲಿತವಾದ ಭಾಷೆಯಲ್ಲಿ ಬರೆದಿರುವುದರಿಂದ ಈ ಗ್ರಂಥವು ತುಂಬ ಜನಪ್ರಿಯವಾಗಿದೆ. ಈಗಲೂ ಹಳ್ಳಿಗಳ ಕಡೆ ಬಹಳ ತರಲೆಯ ಮನುಷ್ಯ ಎಂದು ಸೂಚಿಸಬೇಕಾದರೆ "ಅವನು ಮುದ್ರಾಮಂಜೂಷ ಬಹಳ ಚೆನ್ನಾಗಿ ಓದಿದ್ದಾನೆ" ಎಂದು ಹೇಳುವುದುಂಟು.

ಶ್ರೀಚಾಮರಾಜ ಒಡೆಯರ ಕಾಲದಲ್ಲಿ ಅನೇಕ ಸಂಸ್ಕೃತ ನಾಟಕಗಳು ಕನ್ನಡಕ್ಕೆ ತರ್ಜುಮೆಯಾದುವು. "ಅಭಿನವ ಕಾಳಿದಾಸ" ಎಂಬ ಬಿರುದನ್ನು ಪಡೆದ ಶ್ರೀ ಬಸವಪ್ಪಶಾಸ್ತ್ರಿಗಳು ತಮ್ಮ 'ಶಾಕುಂತಲ' ಮೊದಲಾದ ನಾಟಕಗಳನ್ನೂ 'ದಮಯಂತೀ ಸ್ವಯಂವರ' ಮುಂತಾದ ಕಾವ್ಯಗಳನ್ನೂ ಬರೆದದ್ದು ಈ ಕಾಲದಲ್ಲಿಯೇ. ಇನ್ನೂ ಹಲವು ವಿದ್ವಾಂಸರ ಪರಿಶ್ರಮದ

ಫಲವಾಗಿ, ದೊರೆಗಳ ಮತ್ತು ಮಂತ್ರಿಗಳ ಪ್ರೋತ್ಸಾಹದ ಫಲವಾಗಿ ಮುಖ್ಯಮುಖ್ಯವಾದ ಸಂಸ್ಕೃತನಾಟಕಗಳಿಗೆಲ್ಲ ಕನ್ನಡಭಾಷಾಂತರಗಳು ದೊರೆಯುತ್ತವೆ.

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಗ್ರಂಥರಚನೆ ಮಾಡಿದ 'ಮುದ್ದಣ'ನ ಹೆಸರನ್ನಾದರೂ ಇಲ್ಲಿ ಸ್ಮರಿಸದೆ ಬಿಡುವಹಾಗಿಲ್ಲ. ಈತನ ನಿಜವಾದ ಹೆಸರು ನಂದಳಿಕೆಯ ಲಕ್ಷ್ಮೀನಾರಾಯಣಪ್ಪ. ಇವನು ಹಳಗನ್ನಡ ಗದ್ಯದಲ್ಲಿ ಬರೆದ 'ರಾಮಾಶ್ವಮೇಧ'ದ ಹಾಸ್ಯರಸಭರಿತವಾದ ಸಂಭಾಷಣೆಗಳು ಕನ್ನಡಿಗರಿಗೆ ಅಚ್ಚುಮೆಚ್ಚಾಗಿವೆ. ಇದಲ್ಲದೆ ಈತನು ಅದ್ಭುತ ರಾಮಾಯಣ, ರಾಮಪಟ್ಟಾಭಿಷೇಕಗಳನ್ನೂ ಕೆಲವು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದನು.

ಆದಿಯಿಂದಲೂ ಕನ್ನಡಕ್ಕೆ ಹೆಚ್ಚಾದ ರಾಜಾಶ್ರಯವು ದೊರೆಯುತ್ತಿದ್ದರೂ ಯಾರ ಸಹಾಯವನ್ನೂ, ಆದರ ಪೋಷಣೆಗಳನ್ನೂ ಬಯಸದೆ ನಾಲ್ವರು ಕೇಳಿ ಸಂತೋಷ ಪಟ್ಟರೆ ಅದೇ ಒಂದು ಭಾಗ್ಯವೆಂದೆಣಿಸಿ ಕಾವ್ಯಕಟ್ಟಿದವರೂ ಇದ್ದಾರೆ. ಅದನ್ನು ಸಾಮಾನ್ಯವಾಗಿ ಜನಪದಸಾಹಿತ್ಯವೆಂದು ಕರೆಯುವುದು ವಾಡಿಕೆಯಾಗಿದೆ. ಈ ಜನಪದಸಾಹಿತ್ಯ ದಲ್ಲಿ ಸಾಮಾನ್ಯಜನರ ಸುಖದುಃಖಗಳ ಹಲವು ರಮ್ಯ ಚಿತ್ರಗಳು ದೊರೆಯುತ್ತವೆ. ಕವಿಗಳ ಕಾಲ ದೇಶಗಳೊಂದೂ ತಿಳಿ ಯವು. ಅವರ ಹೆಸರುಗಳು ಕೂಡ ತಿಳಿಯುವಂತಿಲ್ಲ. ಪದ್ಯ ಗಳು ಕೇವಲ ಶ್ರುತಿಯಂತೆ ಬಾಯಿಂದ ಬಾಯಿಗೆ ನಡೆದು ಬಂದವುಗಳು. ಈಚೀಚೆಗೆ ಇವುಗಳನ್ನು ಸಂಗ್ರಹಿಸಿ ಮುದ್ರಿ ಸುವ ಪ್ರಯತ್ನಗಳು ಅಲ್ಲಲ್ಲಿ ನಡೆದಿವೆ. ರಾಜೋದ್ಯಾನದ ಸೌಂದರ್ಯವನ್ನು ನೋಡಿ ಮೆಚ್ಚಿಕೊಂಡವರಿಗೆ ಕಾಡಿನ ಪ್ರಕೃತಿ

ಸೌಂದರ್ಯವು ರುಚಿಸುವುದು ಹೇಗೆ ಕಷ್ಟವೋ ಹಾಗೆಯೇ ವಿದ್ವಾಂಸರ ಗ್ರಂಥಗಳನ್ನು ಮೆಚ್ಚಿಕೊಂಡವರಿಗೆ ಅನಕ್ಷರಸ್ಥರು ರಚಿಸಿದ ಇಂಥಾ ಪದಗಳು ರುಚಿಸುವುದು ಕೊಂಚ ಕಷ್ಟವಾಗಬಹುದು. ಆದರೆ ಇವುಗಳಲ್ಲಿ ಕೆಚ್ಚು, ಉತ್ಸಾಹಗಳಿವೆ; ನಿಜವಾದ ಜೀವನವಿಮರ್ಶೆಯಿದೆ. ವೀರಕಾರ್ಯಗಳನ್ನು ವರ್ಣಿಸುವ ಲಾವಣಿಗಳೂ ಜನರಲ್ಲಿ ಹೆಚ್ಚಾಗಿ ಪ್ರಚಾರದಲ್ಲಿವೆ. ಟಿಪ್ಪುಸುಲ್ತಾನ್ ಲಾವಣಿ, ಸರ್ಜಪ್ಪನಾಯಕನ ಲಾವಣಿ, ಮುಂತಾದುವನ್ನು ಈಗಲೂ ಅಲ್ಲಲ್ಲಿ ಕೇಳಬಹುದು.

ಹೆಣ್ಣುಮಕ್ಕಳು ಕಟ್ಟಿದ ಹಾಡುಗಳಲ್ಲಿ ಅವರ ಜೀವನದ ಸುಖದುಃಖಗಳ ವರ್ಣನೆಯೇ ಹೆಚ್ಚಾಗಿರುವುದು ಆಶ್ಚರ್ಯವಲ್ಲ. ಹೆಣ್ಣುಮಗಳೊಬ್ಬಳು ತಾಯಿಯನ್ನು ಅಗಲಿ ಹೋಗುವಾಗ ಹೇಳುವ ಮಾತಿದು :

ಹೆಣ್ಣ ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ
ಹೆಣ್ಣ ಹೋಗಾಗ ಅಳಬ್ಯಾಡ | ಹಡೆದವ್ವ
ಸಿಟ್ಟಾಗಿ ಶಿವಗೆ ಬೈಬ್ಯಾಡ ||

ತವರುಮನೆಯನ್ನು ಸೇರಿ ಅಣ್ಣ ತಮ್ಮಂದಿರ, ಅತ್ತಿಗೆ ನಾದಿನಿಯರ, ಹಂಗಿಗೊಳಗಾದಾಗ ಗಂಡನ ಮನೆಯೇ ಲೇಸೆನಿಸುತ್ತದೆ.

ಗಂಜೀಯ ಕುಡಿದರು ಗಂಡನ ಮನಿ ಲೇಸ
ಅಂದಣದ ಮ್ಯಾಲ ಚವುರದ | ಸಾರಿದರ
ಹಂಗಿನ ತವರಮನಿ ಸಾಕ ||

ತಾಯಿಲ್ಲದ ತವರಮನೆಯ ವರ್ಣನೆಯನ್ನು ಕೇಳಿ :

ತಾಯಿಲ್ದ ತವರೀಗೆ ಹೋಗಡಿರು ನನ ಮನವ
ನೀರಿಲ್ದ ಕೆರಿಗೆ ಕರ ಬಂದು | ತಿರುಗಾಗ
ಆಗ ನೋಡದರ ದುಃಖಗಳ ||

ಹಡೆದವ್ವ ಇದ್ದರೆ ಮಾಡಲಿಗಕ್ಕಿಯ ಹುಯ್ದು
ಹರಿದಾರಿತನಕ ಕಳುಹೋಳು । ಅತ್ತೀಗೆ
ಬಾಗೀಲಬಿಟ್ಟು ಇಳಿಯೊಳು ॥

ಮತ್ತೊಬ್ಬ ಹೆಣ್ಣುಮಗಳಿಗೆ ತವರುಮನೆಯ ಅಭಿಮಾನ ಅಧಿಕ :

ತವರೂರ ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೇಯಷ್ಟು ಮರಳಿಲ್ಲ । ಬಾನಲ್ಲಿ
ಬಿಸಿಲಿನ ಬೇಗೆ ಸುಡಲಿಲ್ಲ ॥

ಈ ಪದ್ಯಗಳಿಗೆ ಯಾರ ವ್ಯಾಖ್ಯಾನವೂ ಅಗತ್ಯವಿಲ್ಲ. ಭಾಷೆ ಬಹಳ ಸುಲಭ. ಹೇಳುವ ವಿಷಯ ಜನಗಳ ನಿತ್ಯ ಜೀವನಕ್ಕೆ ಸಂಬಂಧಿಸಿದ್ದು. ಸಹಜವಾಗಿ ಬಂದ ಅಲಂಕಾರಗಳಿಗೆ ಕೊರತೆಯಿಲ್ಲ. ಆದರೆ ಇವುಗಳಲ್ಲಿ ಪಾಂಡಿತ್ಯವಿಲ್ಲ. ಇಲ್ಲದಿದ್ದರೆ ನಷ್ಟವೇನು?

[illegible] ಬಂಜೆಯ ಬಾಳನ್ನು ವರ್ಣಿಸುವ ಒಂದು ಪದ್ಯವನ್ನು ಹೇಳೋಣ :

ಬಾಲಕರಿಲ್ಲದ ಬಾಲೀದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದ್ಹಂಗ । ಬಾಳಿಲಿಯು
ಹಾಸ್ಕ್ಯಂಡು ಬೀಸಿ ಒಗೆದ್ಹಂಗ ॥

ಅಳುವ ಮಗುವಿನ ವರ್ಣನೆಯೊಂದನ್ನು ಹೇಳಿ ಈ ವಿಮರ್ಶೆಯನ್ನು ಮುಗಿಸಬಹುದು.

ಅಳುವ ಕಂದನ ತುಟಿಯು ಹವಳದ ಕುಡಿಯ್ಹಂಗ
ಕುಡಿಹುಬ್ಬು ಬೇವಿನೆಸಳ್ಹಂಗ । ಕಣ್ಣೋಟ
ಶಿವನ ಕೈಯಲಗು ಹೊಳೆದ್ಹಂಗ ॥

ಸರ್ವಜ್ಞನೆಂಬ ಪ್ರಸಿದ್ಧಪುರುಷನು ಹಾಡಿದ ತ್ರಿಪದಿಗಳು ಕನ್ನಡಿಗರಿಗೆಲ್ಲ ಮೆಚ್ಚಾಗಿವೆ. ಇವನು ಯಾವ ಕಾಲದಲ್ಲಿದ್ದ

ನೆಂಬುದು ಸರಿಯಾಗಿ ತಿಳಿಯದು. ಕಡೆಗೆ ‘ಸರ್ವಜ್ಞ’ ಎಂಬ ಅಂಕಿತವುಳ್ಳ ಪದ್ಯಗಳೆಲ್ಲ ಒಬ್ಬನ ಕೃತಿಯೆಂದೇ ಹೇಳಲು ಕೂಡ ಸಾಧ್ಯವಿಲ್ಲ. ಇದು ಹೇಗಾದರೂ ಇರಲಿ. ಸರ್ವಜ್ಞನು ತೆಲುಗಿನ ವೇಮನ್ನನಂತೆ ‘ಆಶುಕವಿ’; ‘ಕುಂತಲ್ಲಿ ನಿಂತಲ್ಲಿ ಪದಗಳ ಹೇಳುವ’ ಸಂಪ್ರದಾಯದವನು. ಇವನ ಮಾತುಗಳು ಬಹಳ ಅರ್ಥಗರ್ಭಿತವಾಗಿದ್ದು ಗಾದೆಗಳಂತೆ ಎಂದಿಗೂ ಮರೆಯಲಾಗದಂಥವು. ಇವನು ಕನ್ನಡನಾಡಿನಲ್ಲೆಲ್ಲ ಸಂಚಾರಮಾಡಿದಂತೆ ಇವನ ಪದ್ಯಗಳಿಂದಲೇ ತಿಳಿಯುತ್ತದೆ. ತನ್ನ ಮಲೆನಾಡಿನ ಅನುಭವವನ್ನು ಕೆಲವು ಪದ್ಯಗಳಲ್ಲಿ ಹೀಗೆ ಹೇಳಿದ್ದಾನೆ:

ಕಾಡೆಲ್ಲ ಕಸುಗಾಯಿ ನಾಡೆಲ್ಲ ಹೆಗ್ಗಿಡವು
ಆಡಿದ ಮಾತು ನಿಜವಿಲ್ಲ ಮಲೆನಾಡ
ಕಾಡು ಸಾಕೆಂದ ಸರ್ವಜ್ಞ ||

ಶೀತಧಾತುಗಳುಂಟು ಬಾತಿಹವು ಕುಕ್ಷಿಗಳು
ಪಾತಕರು ಮರದಿ ತಿಂದುಂಬ ನಾಡಿಗೆ
ಯಾತಕ್ಕೆ ಬಹರು ಸರ್ವಜ್ಞ ||

ಹೀಗೆ ಮಲೆನಾಡನ್ನು ಬೈದಿದ್ದರೂ ಇನ್ನೊಂದು ಕಡೆ ಅಲ್ಲಿನ ವೈಭವವನ್ನು ಹೊಗಳಿದ್ದಾನೆ:

ಅಲ್ಲವರುಷಣವುಂಟು ಬೆಲ್ಲ ಬಿಳಿಯೆಲೆಯುಂಟು
ಒಳ್ಳೆ ಹಲಸುಂಟು ಮೆಲ್ಲಲ್ಕೆ ಮಲೆನಾಡ
ನಲ್ಲೆನ್ನಬಹುದೆ ಸರ್ವಜ್ಞ ||

ಬಡಗಲು ದೇಶದ ಜಲಕ್ಷಾಮವನ್ನು ಒಂದು ಪದ್ಯದಲ್ಲಿ ಹೇಳಿದ್ದಾನೆ:

ಊರು ಸನಿಹದಲಿಲ್ಲ ನೀರೊಂದು ಗಾವುದವು
ಸೇರಿ ನಿಲುವರೆ ನೆರಳಿಲ್ಲ ಬಡಗಲಾ
ದಾರಿ ಬೇಡೆಂದ ಸರ್ವಜ್ಞ ||

ಸರ್ವಜ್ಞನು ಶೈವಮತದ ಹಲವು ಸಿದ್ಧಾಂತಗಳನ್ನೂ ಲೌಕಿಕದ ನೀತಿಗಳನ್ನೂ ಉಪದೇಶಿಸಿದ್ದಾನೆ. ತಾನು ಕಂಡ ಸಮಾಜದ ಹಲವು ಕುಂದು ಕೊರತೆಗಳನ್ನು ಎತ್ತಿಹಾಕಿದ್ದಾನೆ. ಇವನು ಹಾಸ್ಯಪ್ರಿಯನಾದ ಕವಿ. ನಕ್ಕು ನಗಿಸುವ ಹಾಸ್ಯವೇ ಇವನ ದೊಡ್ಡ ಗುಣ. ಮೂರ್ಖರೊಡನೆ ಹೋರಾಡಿ ಫಲವಿಲ್ಲ, ಅವರನ್ನು ತಿದ್ದುವ ಪ್ರಯತ್ನ ಸುಮ್ಮನೆ ಆಯಾಸಕ್ಕೆ ಕಾರಣ ಎಂಬ ತನ್ನ ಅನುಭವವನ್ನು ಹೀಗೆ ಹೇಳಿದ್ದಾನೆ:

**ನೆಲವನ್ನು ಮುಗಿಲನ್ನು ಹೊಲಿವರುಂಟೆಂದರೆ**
**ಹೊಲಿವರು ಹೊಲಿವರೆನಬೇಕು ಮೂರ್ಖನಲಿ**
**ಕಲಹವೇ ಬೇಡ ಸರ್ವಜ್ಞ ॥**

ಈತನ ನಿಜವಾದ ಹೆಸರು ತಿಳಿಯದು. 'ಪುಷ್ಪದತ್ತ' ನೆಂದಿರಬಹುದೆಂದು ಒಂದು ಊಹೆಯಿದೆ. ಏನೇ ಆದರೂ ಅವನ ನಿಜವಾದ ಹೆಸರು ಸರ್ವಜ್ಞನೆಂದಿರಲಾರದು. ಅದು ಅವನಿಟ್ಟುಕೊಂಡ ಬಿರುದು. ಈ ಬಿರುವನ್ನು ನೋಡಿದರೆ ಅವನು ಬಹಳ ಆತ್ಮಪ್ರತ್ಯಯವುಳ್ಳ, ಎಂದರೆ ತನ್ನ ಶಕ್ತಿಯಲ್ಲಿ ತನಗೆ ಅಗಾಧ ನಂಬಿಕೆಯುಳ್ಳ, ವ್ಯಕ್ತಿಯೆಂದು ತೋರುತ್ತದೆ.

**ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವುದು**
**ಬಿಸಿಲಿಗೆ ಹಸುರೆಳಸದಿರ್ಪ ಪನಿಯಾರಿ**
**ಹುಸಿದುಹೋದಂತೆ ಸರ್ವಜ್ಞ ॥**

ಈ ಪದ್ಯದಿಂದ ಸರ್ವಜ್ಞನು ಶಿವಭಕ್ತನೆಂದೂ ಬಸವ ಪಂಥದವನೆಂದೂ ತಿಳಿಯುತ್ತದೆ. ಆದರೆ ಇವನು ಇತರ ಮತಗಳ ವಿಷಯದಲ್ಲಿ ಬಹಳ ಉದಾರಬುದ್ಧಿಯುಳ್ಳವನಾಗಿದ್ದನು. ಏಕೆಂದರೆ ಇನ್ನೊಂದು ಕಡೆ ಅವನು ಜೈನ ಧರ್ಮವನ್ನು ಹೊಗಳಿರುವ ಪದ್ಯ ಸಿಕ್ಕುತ್ತದೆ:

ಉಪ್ಪು ಸಪ್ಪನೆಯಕ್ಕು ಕಪ್ಪುರವು ಕರಿದಕ್ಕು
ಸರ್ಪಸಿಗೆ ಬಾಲವೆರಡಕ್ಕು ಶ್ರವಣರು
ತಪ್ಪಾಡಿದಂದು ಸರ್ವಜ್ಞ ॥

ಇನ್ನೊಂದು ಸಂದರ್ಭದಲ್ಲಿ ಸರ್ವಜ್ಞನು "ನೀತಿಯನರಿದ ವಿಪ್ರನು ಜಗದೊಳು ಜ್ಯೋತಿಯಿದ್ದಂತೆ" ಎಂದಿದ್ದಾನೆ. ಹೀಗೆ ಸರ್ವಜ್ಞನು ಸರ್ವಗುಣಗ್ರಾಹಿಯೆಂದು ವ್ಯಕ್ತವಾಗುತ್ತದೆ.

ಸರ್ವಜ್ಞನು ಎಲ್ಲ ಕಾಲದಲ್ಲಿಯೂ ಬಹಳ ವಿರಕ್ತನಾಗಿದ್ದನೆಂದು ಹೇಳುವಂತಿಲ್ಲ. ಆವನ ಕೆಲವು ಪದ್ಯಗಳಲ್ಲಿ ಒಳ್ಳೆಯ ಭೋಜನ ರಸಿಕತೆಯು ಕಾಣಬರುತ್ತದೆ:

ನವಣೆಯಾ ಬೋನಕ್ಕೆ ಹವಣುಳ್ಳ ತೊಗೆಯಾಗಿ
ಕವಣೆಗಲ್ಲಷ್ಟು ಬೆಣ್ಣೆ ಕಾಯ್ದರೂಟದ
ಹವಣನೋಡೆಂದ ಸರ್ವಜ್ಞ ॥

ಸಂಸಾರದ ಸುಖಸ್ವರೂಪವನ್ನು ಹೀಗೆ ವರ್ಣಿಸಿದ್ದಾನೆ:

ಬೆಚ್ಚನೆ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಾಗೆ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ ॥

ಇವನಿಂದ ಕನ್ನಡದ ತ್ರಿಪದಿ ಹೆಚ್ಚು ಪ್ರಸಿದ್ಧಿಗೆ ಬಂತು. ಆವನ ಉಪದೇಶಕಾರ್ಯಕ್ಕೆ ಈ ಸಣ್ಣ ಪದ್ಯಜಾತಿಯು ಸಾಕಾಯಿತೆಂದು ತೋರುತ್ತದೆ.

ಈ ಪ್ರಕರಣವನ್ನು ಮುಗಿಸುವ ಮೊದಲು ಸರ್ವಜ್ಞನ ವಿಚಾರಪರತೆಗೆ ಸಾಕ್ಷಿಯಂತಿರುವ ಒಂದು ಪದ್ಯವನ್ನು ಗಮನಿಸೋಣ:

ಸತ್ಕರಾ ನುಡಿ ತೀರ್ಥ ನಿತ್ಕರಾ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ
ರೆತ್ತಣದು ತೀರ್ಥ ಸರ್ವಜ್ಞ ॥

# ಪರಿಸಮಾಪ್ತಿ

ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಕನ್ನಡದಲ್ಲಿ ಆಧುನಿಕಸಾಹಿತ್ಯವು ಆರಂಭವಾಯಿತು. ಹಿಂದಿನ ಸಾಹಿತ್ಯದಲ್ಲಿ ಸಂಸ್ಕೃತದ ಪ್ರಭಾವವನ್ನು ಕಂಡರೆ ಇಂದಿನ ಸಾಹಿತ್ಯದಲ್ಲಿ ಇಂಗ್ಲಿಷಿನ ಪ್ರಭಾವವನ್ನು ಕಾಣಬಹುದು. ಇಂಗ್ಲಿಷ್ ಭಾಷಾ ಸಾಹಿತ್ಯಗಳ ಪರಿಚಯವಾದ ಮೇಲೆ ಕನ್ನಡಿಗರು ಜೀವನ ಚರಿತ್ರೆ, ಕಾದಂಬರಿ, ಸಣ್ಣಕಥೆ, ಪ್ರಹಸನ ಮುಂತಾದ ಹೊಸ ಬಗೆಯ ಕಾವ್ಯಗಳನ್ನುಬರೆಯತೊಡಗಿದರು. ವಿಮರ್ಶೆಯ ಗ್ರಂಥ ಗಳು ಹಲವು ಹುಟ್ಟಿವೆ. ವಿಜ್ಞಾನ ವಿಷಯಗಳನ್ನು ಕುರಿತ ಗ್ರಂಥಗಳು ಈಗೀಗ ರಚಿತವಾಗುತ್ತಿವೆ. ಗದ್ಯಗ್ರಂಥಗಳೇ ಅಲ್ಲದೆ ಈ ಕಾಲದಲ್ಲಿ ಪದ್ಯಕಾವ್ಯಗಳೂ ಹೆಚ್ಚಾಗಿ ಬರುತ್ತಿವೆ. ವೃತ್ತ, ಕಂದ, ತ್ರಿಪದಿ, ಷಟ್ಪದಿಗಳನ್ನು ಬಿಟ್ಟು ಹೊಸ ಕವಿಗಳು ಕೆಲವು ಹೊಸ ಮಟ್ಟುಗಳನ್ನು ಬಳಕೆಗೆ ತಂದಿದ್ದಾರೆ. ಇನ್ನೊಂದುಕಡೆ, ಪುರಾತನ ಗ್ರಂಥಗಳನ್ನು ಸಂಗ್ರಹಿಸಿ ಪ್ರಕಟಿಸುವ ಕಾರ್ಯವು ಭರದಿಂದ ನಡೆಯುತ್ತಿದೆ.

ಕನ್ನಡಸಾಹಿತ್ಯದ ಸೇವೆಯಲ್ಲಿ ಸಮಾಜದ ಎಲ್ಲ ವರ್ಗ ದವರೂ, ಎಲ್ಲ ಧರ್ಮಗಳವರೂ ಭಾಗಿಗಳಾಗಿದ್ದಾರೆ. ಕಾವ್ಯ ಸಮೃದ್ಧಿ, ಗ್ರಂಥಗಳ ವಸ್ತುವೈವಿಧ್ಯ, ಕಾವ್ಯಗಳ ಶ್ರೇಷ್ಠತೆ, ಯಾವ ದೃಷ್ಟಿಯಿಂದಲೂ ಕನ್ನಡವು ತಲೆ ತಗ್ಗಿಸಬೇಕಾಗಿಲ್ಲ. ಈ ವಿಸ್ತಾರವಾದ ವಾಙ್ಮಯಸಂಪತ್ತನ್ನು ನೋಡಿ ಯಾವ ಕನ್ನಡಿಗನು ತಾನೇ ಆನಂದಿಸುವುದಿಲ್ಲ! ಕನ್ನಡನುಡಿಯ ಸೇವೆಗೆ ತಾನೂ ಕಂಕಣಕಟ್ಟಿ ಕೃತಾರ್ಥನಾಗಲು ಯತ್ನಿಸು ವುದಿಲ್ಲ!